ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

23 ಆಗಸ್ಟ್, 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -161 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕೊಲಂಬೊದಲ್ಲಿ ಇಂದಿನಿಂದ ಭಾರತ-ಶ್ರೀಲಂಕಾ ನಡುವಿನ 2ನೇ ಟೆಸ್ಟ್ ಪಂದ್ಯ ಆರಂಭ...




ಕರ್ನಾಟಕದಲ್ಲೊಂದು ಗುಟ್ಕಾ ನಿಷೇಧ ಪ್ರಹಸನ! » 2



ಶಿಕ್ಷಣದಿಂದ ಬದಲಾವಣೆ, ಸಮಾಜದಲ್ಲಿ ಗೌರವ » 3



ಎಲ್ಲಾ ಕ್ಷೇತ್ರಗಳ ಸುಧಾರಣೆ ನಮ್ಮ ಬದ್ಧತೆ: ಮೋದಿ » 4


# ನೈಸ್ ಸಂಸ್ಥೆಯೊಂದಿಗೆ ಸರ್ಕಾರ ಶಾಮೀಲು

## ರೈತರಿಗೆ ಅನ್ಯಾಯ, ಭಾರೀ ಪ್ರಮಾಣದ ಲೂಟಿ : ಹೆಚ್.ಡಿ.ಕುಮಾರಸ್ವಾಮಿ ಆರೋಪ

• ಪ್ರಜೋದಯ ವರದಿ

**ಹೊಳೆನರಸೀಪುರ:** ನೈಸ್ ರಸ್ತೆ ಯೋಜನೆ ದೇವೇಗೌಡರ ಕನಸಿನ ಕೂಸು. ದೇವೇಗೌಡರು ಪ್ರಧಾನಿಯಾಗಿ ದೆಹಲಿಗೆ ತೆರಳಿದ ಬಳಿಕ ಅಧಿಕಾರಕ್ಕೆ ಬಂದ ಸರ್ಕಾರಗಳು ನೈಸ್ ಕಂಪನಿಗೆ ರೆಡ್ ಕಾರ್ಪೆಟ್ ಹಾಸಿ, ಯೋಜನೆಯ ಹೆಸರಿನಲ್ಲಿ ರೈತರಿಗೆ ಅನ್ಯಾಯ ಮಾಡಿ, ಭಾರೀ ಪ್ರಮಾಣದ ಲೂಟಿ ನಡೆಸಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆರೋಪಿಸಿದರು.

ತಾಲ್ಲೂಕಿನ ಹರದನಹಳ್ಳಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರು ಪ್ರಧಾನಿಯಾಗುವ ಮೊದಲು 18 ತಿಂಗಳ ಅವಧಿಯಲ್ಲಿ ಎಂಒಯುಗೆ ಸಹಿ ಹಾಕಿದ್ದರು. ನಂತರ ಬಂದ ಸರ್ಕಾರಗಳು ಯೋಜನೆಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ಬದಲು ದುರುಪಯೋಗಕ್ಕೆ ಅವಕಾಶ ಮಾಡಿಕೊಟ್ಟವು ಎಂದು ಹೇಳಿದರು.

ಬಿಎಂಐಸಿಪಿ ಪ್ರಾಧಿಕಾರ ರಚನೆಯಾದ ಬಳಿಕ ಅಧಿಕಾರಿಗಳು ಹಾಗು ಸರ್ಕಾರಗಳು ಕಂಪನಿಯ ಪರವಾಗಿ ಕಾರ್ಯನಿರ್ವಹಿಸಿ ನ್ಯಾಯಾಲಯಗಳಿಗೆ ತಪ್ಪು ಮಾಹಿತಿಗಳನ್ನು ಸಲ್ಲಿಸುವ ಮೂಲಕ ರೈತರನ್ನು ಸಂಕಷ್ಟಕ್ಕೆ ದೂಡಿದವು. 20 ವರ್ಷಗಳಾದರೂ ಭೂಮಿ ಕಳೆದುಕೊಂಡ ರೈತರಿಗೆ ಸಮರ್ಪಕ ಪರಿಹಾರ ದೊರೆತಿಲ್ಲ. ರೈತರ ಭೂಮಿಯನ್ನು ಪಡೆದು ಜಂಟಿ ಅಭಿವೃದ್ಧಿ ಯೋಜನೆಗಳು ಹಾಗು ಮಾರಾಟ ವ್ಯವಹಾರಗಳನ್ನು ನಡೆಸಲಾಗಿದೆ. ಅದರ ಸಂಪೂರ್ಣ ಮಾಹಿತಿಯಿದ್ದರೂ ಸರ್ಕಾರ ಜಾಣ ಮೌನ ವಹಿಸಿವೆ ಎಂದು ಟೀಕಿಸಿದರು.



ಸರ್ಕಾರವೇ ನೈಸ್ ಸಂಸ್ಥೆಯೊಂದಿಗೆ ಶಾಮೀಲಾಗಿ ಸಾರ್ವಜನಿಕರ ಹಿತಾಸಕ್ತಿ ಕಡೆಗಣಿಸಿದೆ. ಜನತೆಗೆ ಆಗುತ್ತಿರುವ ಅನ್ಯಾಯವನ್ನು ಬಹಿರಂಗಪಡಿಸುವುದು ನನ್ನ ಕರ್ತವ್ಯ. ನೈಸ್ ಯೋಜನೆಯಲ್ಲಿ ಫ್ರೇಮ್‌ವರ್ಕ್ ಒಪ್ಪಂದದ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಟೋಲ್ ಸಂಗ್ರಹಿಸಲು ಕಾನೂನು ಬದ್ಧ ಅವಕಾಶ ಇಲ್ಲದಿದ್ದರೂ ಅನುಮತಿ ನೀಡಲಾಗಿದೆ. ವರ್ಷದಿಂದ ವರ್ಷಕ್ಕೆ ಮನಬಂದಂತೆ ದರ ಹೆಚ್ಚಿಸಲಾಗಿದೆ. ಸರ್ಕಾರದ ಅನುಮತಿ ಪಡೆಯದೆ ವಾಹನ ಸವಾರರಿಂದ ಶುಲ್ಕ ವಸೂಲಿ ಮಾಡಲಾಗಿದೆ. ಇದುವರೆಗೆ ಸುಮಾರು 2,000 ಕೋಟಿ ರೂ. ಸಂಗ್ರಹಿಸಲಾಗಿದೆ ಎಂದು ಹೇಳಿದರು.

111 ಕಿ. ಮೀಟರ್ ರಸ್ತೆ ನಿರ್ಮಾಣದ ಗುರಿ ಹೊಂದಿದ್ದ ಯೋಜನೆಯಲ್ಲಿ ಕೇವಲ ಐದು ಕಿ. ಮೀಟರ್ ರಸ್ತೆ ಮಾತ್ರ ನಿರ್ಮಿಸಲಾಗಿದೆ. ಆದರೂ ಟೋಲ್ ಸಂಗ್ರಹಕ್ಕೆ ಅವಕಾಶ ನೀಡಿರುವುದು ಸರಿಯಲ್ಲ. ನ್ಯಾಯಾಲಯದ ಆದೇಶಗಳ ಹೆಸರಿನಲ್ಲಿ ಬಡ ಜನರ ಜೀವನ ಹಾಳು ಮಾಡಲಾಗಿದೆ. ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ಆ ರಸ್ತೆಯಲ್ಲಿ ಸಂಚರಿಸುವ ಜನರು ಟೋಲ್ ಪಾವತಿಸಬಾರದೆಂದು ನಾನು ಹೇಳಿದ್ದೇನೆ. ಸಾರ್ವಜನಿಕರಿಗೆ ತೊಂದರೆ ಕೊಡಲು ಅಲ್ಲ, ಅವರಿಂದ ಅನ್ಯಾಯವಾಗಿ ಹಣ ವಸೂಲಿ ಮಾಡುವುದನ್ನು ವಿರೋಧಿಸಲು ಈ ಮಾತು ಹೇಳಿದ್ದೇನೆಂದು ಸ್ಪಷ್ಟಪಡಿಸಿದರು.

**ತನಿಖೆ ದಾರಿ ತಪ್ಪಿಸಿದ ಸರ್ಕಾರ**

ವಾಲ್ಮೀಕಿ ಹಗರಣದ ತನಿಖೆಯ ದಾರಿಯನ್ನೇ ಸರ್ಕಾರ ತಪ್ಪಿಸಿದೆ. ಅಲ್ಲಿ ಕೆಲಸ ಮಾಡುವ ವ್ಯಕ್ತಿ ಅಕ್ರಮವಾಗಿದೆ ಎಂದು ಡೆತ್‌ನೋಟ್‌ನಲ್ಲಿ ಬರೆಯದಿದ್ದರೆ ಈ ವಿಷಯ ಮುಚ್ಚಿಹೋಗುತ್ತಿತ್ತು. ಆ ಘಟನೆಯಲ್ಲಿ ಇನ್ನೂ ಯಾರದ್ದಾದರೂ ಪಾತ್ರ ಇದೆಯೇ, ಅದಕ್ಕಾಗಿ ಸರ್ಕಾರ ರಕ್ಷಣೆ ಕೊಡುತ್ತಿದೆಯೇ ಎಂದು ಪ್ರಶ್ನಿಸಿದ ಅವರು, ಗೃಹಲಕ್ಷ್ಮಿ ಯೋಜನೆಯಲ್ಲಿ 5 ಸಾವಿರ ಕೋಟಿ ನೀಡಿಲ್ಲದಿರುವುದು ಚರ್ಚೆ ನಡೆಯಿತು. ಆನಂತರ ಆ ದುಡ್ಡು ಏನಾಯ್ತು, ಸತ್ಯಾಂಶ ಹೇಳಲಿಲ್ಲ. ಇದುವರೆಗೂ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿದರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಇದ್ದರು.

### ಮಂತ್ರಿ ಸ್ಥಾನ ಉಳಿಸಿಕೊಳ್ಳಲು ಜಾತಿ ನೆರಳು

ಮಂತ್ರಿ ಸ್ಥಾನ ಉಳಿಸಿಕೊಳ್ಳಲು ಜಾತಿಯ ನೆರಳನ್ನು ದುರುಪಯೋಗ ಪಡಿಸಿಕೊಳ್ಳುವುದು ಯಾರಿಗೂ ಶೋಭೆಯಲ್ಲ. ಸಚಿವ ನಾಗೇಂದ್ರ ಅವರ ವಿಚಾರದಲ್ಲಿ ಜಾತಿ ಕ್ಲೈಮ್ ಮಾಡಲು ಆಗಲ್ಲ. ಅವರು ನಾಡಿನ ಮಂತ್ರಿಯಾಗಿ ಕೆಲಸ ಮಾಡಿದವರು. 189 ಕೋಟಿ ರೂ. ಗಳಲ್ಲ 84 ಕೋಟಿ ರೂ. ಅವ್ಯವಹಾರ ಆಗಿದೆ ಎಂದು ಅಂದಿನ ಮುಖ್ಯಮಂತ್ರಿಯೇ ಒಪ್ಪಿಕೊಂಡಿದ್ದಾರೆ. ಆನಂತರ ಅವರ ರಾಜೀನಾಮೆ ಪಡೆದಿದ್ದಾರೆ. ಮತ್ತೆ ಅದೇ ವ್ಯಕ್ತಿಯನ್ನು ಮಂತ್ರಿ ಮಾಡಿಕೊಂಡರೆ ರಾಜ್ಯದ ಜನತೆಗೆ ಏನು ಸಂದೇಶ ನೀಡುತ್ತೀರಿ ಎಂದು ಪ್ರಶ್ನಿಸಿದರು.

### ಬಿಡದಿ ಟೌನ್‌ಶಿಪ್: ಸಮಿತಿ ಉದ್ದೇಶವೇನು..?

ಬಿಡದಿ ಟೌನ್‌ಶಿಪ್ ಯೋಜನೆ ಸಂಬಂಧ ಸರ್ಕಾರ ರಚಿಸಿರುವ ಸಮಿತಿಯ ಉದ್ದೇಶವೇನು ಎಂದು ಸರ್ಕಾರವೇ ಸ್ಪಷ್ಟಪಡಿಸಬೇಕು. ಸಮಿತಿ ಮುಖ್ಯಸ್ಥರಾಗಿರುವ ನಿವೃತ್ತ ನ್ಯಾಯಾಧೀಶರು, ಹಿಂದೆ ಈಗಲ್‌ಟನ್ ಗಾಲ್ಫ್ ಕ್ಲಬ್‌ಗೆ ಸಂಬಂಧಿಸಿದ ಭೂಮಿ ವಿಚಾರ ಪ್ರಕರಣದಲ್ಲಿ ತೀರ್ಪು ನೀಡಿದ್ದರು. ಆಗ 70 ಎಕರೆ ಸರ್ಕಾರಿ ಕರಾಬು ಭೂಮಿಗೆ ಎಕರೆಗೆ 12 ಕೋಟಿ ರೂ. ನಿಗದಿಪಡಿಸ ಲಾಗಿತ್ತು. ಒಟ್ಟು 938 ಕೋಟಿ ರೂ. ಪಾವತಿಸುವಂತೆ ಆಗಿನ ಸಚಿವ ಸಂಪುಟ ನಿರ್ಧರಿಸಿತ್ತು. ನಂತರ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದಾಗ, ಇದೇ ನ್ಯಾಯಾಧೀಶರು ಸಚಿವ ಸಂಪುಟದ ನಿರ್ಧಾರ ಎತ್ತಿ ಹಿಡಿದಿದ್ದರು. ಅಂದು ಎಕರೆಗೆ 12 ಕೋಟಿ ರೂ. ನಿಗದಿ ಪಡಿಸಿ, ಕೇವಲ 2 ಕೋಟಿ ರೂ. ನೀಡುವುದು ಸೂಕ್ತವೇ, ವರದಿ ನೀಡಲು ನಿವೃತ್ತ ನ್ಯಾಯಾಧೀಶರನ್ನೇ ಸಮಿತಿ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವುದು ಹೇಗೆ ಎಂದು ಪ್ರಶ್ನಿಸಿದರು.

# ರಂಗನಾಥಸ್ವಾಮಿಗೆ ಕುಮಾರಸ್ವಾಮಿ ವಿಶೇಷ ಶ್ರಾವಣ ಪೂಜೆ



• ಪ್ರಜೋದಯ ವರದಿ

**ಹೊಳೆನರಸೀಪುರ:** ಎರಡನೇ ಶ್ರಾವಣ ಶನಿವಾರದ ಹಿನ್ನಲೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಾಲ್ಲೂಕಿನ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಪ್ರತಿವರ್ಷ ಶ್ರಾವಣ ಮಾಸದ ಶನಿವಾರದಂದು ದೇವಾಲಯಕ್ಕೆ ಭೇಟಿ ನೀಡುವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸಹೋದರ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಸಾಥ್ ನೀಡಿದರು. ರೇವಣ್ಣ ಅವರ ಕುಟುಂಬ ಸದಸ್ಯರಾದ ಭವಾನಿ ರೇವಣ್ಣ, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು ಸಹ ಪೂಜೆಯಲ್ಲಿ ಭಾಗವಹಿಸಿದ್ದರು.

ಕುಟುಂಬ ಸದಸ್ಯರೊಂದಿಗೆ ರಂಗನಾಥಸ್ವಾಮಿಗೆ ಅಭಿಷೇಕ ನೆರವೇರಿಸಿದ ಭವಾನಿ ರೇವಣ್ಣ, ಬಳಿಕ ಸುಮಾರು ಒಂದು ಗಂಟೆ ಗರ್ಭ ಗುಡಿಯಲ್ಲಿ ಕುಳಿತು ಪೂಜೆ ಸಲ್ಲಿಸಿದರು. ಈ ವೇಳೆ ಕೈಮುಗಿದು ಕುಳಿತಿದ್ದಭವಾನಿರೇವಣ್ಣ ಅವರು ಭಾವುಕರಾಗಿ ಕಣ್ಣೀರಿಟ್ಟರು. ಪೂಜೆಯುದ್ದಕ್ಕೂ ಕಣ್ಣೀರು ಹರಿಸುತ್ತಲೇ ದೇವರ ಆರಾಧನೆಯಲ್ಲಿ ಭಾಗವಹಿಸಿದರು.

2ನೇ ಶ್ರಾವಣ ಶನಿವಾರದ ಹಿನ್ನಲೆ ಬೆಟ್ಟದ ರಂಗನಾಥಸ್ವಾಮಿ ದೇವಾಲಯಕ್ಕೆ ಭಕ್ತರ ದಂಡೇ ಹರಿದುಬಂದಿತ್ತು. ವಿಶೇಷ ಪೂಜೆ ಹಾಗು ಅಭಿಷೇಕದ ಬಳಿಕ ದೇವಾಲಯದ ಗರ್ಭಗುಡಿಯ ಬಾಗಿಲನ್ನು ಅಲಂಕಾರಕ್ಕಾಗಿ ಮುಚ್ಚಲಾಯಿತು.

ಬಾಗಿಲು ಮುಚ್ಚುವ ಮುನ್ನ ಹೆಚ್.ಡಿ.ರೇವಣ್ಣ ಅವರು ಭಕ್ತರನ್ನು ದೇವಾಲಯದ ಒಳಗೆ ಕರೆದು ದರ್ಶನ ಪಡೆಯುವಂತೆ ಮನವಿ ಮಾಡಿದರು. ಭಕ್ತರೊಂದಿಗೆ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ. ರೇವಣ್ಣ ಅವರು ದೇವರ ದರ್ಶನ ಪಡೆದರು. ಬಳಿಕ ಹರದನಹಳ್ಳಿಯಲ್ಲಿರುವ ದೇವೇಶ್ವರಸ್ವಾಮಿ ದೇಗುಲಕ್ಕೂ ಭೇಟಿ ನೀಡಿ ಪೂಜೆ ಸಲ್ಲಿಸಿದರು.

# ಕ್ರೀಡೆಯಿಂದಲೂ ಉನ್ನತ ಸ್ಥಾನಕ್ಕೇರಬಹುದು: ಸಿಮೆಂಟ್ ಮಂಜು

## ಅಂಕ ಗಳಿಕೆಯೊಂದೇ ಮಕ್ಕಳ ಆದ್ಯತೆ ಆಗದಿರಲಿ | ಕ್ರೀಡಾಕೂಟಕ್ಕೆ ಚಾಲನೆ



• ಪ್ರಜೋದಯ ವರದಿ

**ಸಕಲೇಶಪುರ:** ಅಂಕಗಳಿಕೆಯಿಂದ ಮಾತ್ರ ಜೀವನದಲ್ಲಿ ಉನ್ನತ ಸ್ಥಾನ ತಲುಪಬಹುದೆಂಬ ಮಾನಸಿಕತೆಯಿಂದ ಯುವಕರು ಹೊರಬಂದು ಕ್ರೀಡೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ದೇಶವನ್ನು ಪ್ರತಿನಿಧಿಸುವ ಅವಕಾಶ ಸೃಷ್ಟಿಸಿಕೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಶನಿವಾರ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮತ್ತು ಕೌಡಳ್ಳಿ ಜೆಎಸ್‌ಎಸ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವತಿಯಿಂದ ನಡೆದ 2026-27ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒಂದು ಕಾಲದಲ್ಲಿ ಒಲಿಂಪಿಕ್ಸ್ ಸೇರಿ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತಕ್ಕೆ ಒಂದೇ ಒಂದು ಪದಕ ಗೆಲ್ಲುವುದೂ ಕಷ್ಟವಾಗಿತ್ತು. ಆದರೆ ಇಂದು ಭಾರತದ ಕ್ರೀಡಾಪಟುಗಳು ಚಿನ್ನ, ಬೆಳ್ಳಿ ಹಾಗು ಕಂಚಿನ ಪದಕಗಳನ್ನು ಗೆದ್ದು ದೇಶದ ಕೀರ್ತಿ ಹೆಚ್ಚಿಸುತ್ತಿದ್ದಾರೆ. ನಿರಂತರ ಪ್ರಯತ್ನವಿದ್ದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಸಾಧ್ಯ ಎಂಬುದನ್ನು ಕ್ರೀಡಾಪಟುಗಳು ತೋರಿಸಿಕೊಟ್ಟಿದ್ದಾರೆಂದರು.

**ಕ್ರೀಡೆ ಆರೋಗ್ಯದ ಮೂಲ**

ಪ್ರತಿಯೊಬ್ಬರೂ ದಿನನಿತ್ಯದ ಜೀವನದಲ್ಲಿ ಕ್ರೀಡೆಗೆ ಆದ್ಯತೆ ನೀಡಬೇಕು. ಒಂದು ಆಟದ ಮೈದಾನ ಹತ್ತು ಆಸ್ಪತ್ರೆಗಳಿಗೆ ಸಮಾನ ಎಂಬ ಮಾತಿದೆ. ಯುವಕರ ಆರೋಗ್ಯಕರ ಜೀವನಕ್ಕೆ ಕ್ರೀಡಾಂಗಣಗಳು ಅತ್ಯವಶ್ಯಕ. ಹಿಂದೆ ಎಲ್ಲೆಡೆ ಖಾಲಿ ಜಾಗ, ಆಟದ ಮೈದಾನ ಲಭ್ಯವಿದ್ದವು. ಆದರೆ ಈಗ ಭೂಮಿಯ ಬೆಲೆ ಹೆಚ್ಚಾಗಿರುವುದರಿಂದ ಖಾಲಿ ಜಾಗಗಳೆಲ್ಲ ತಂತಿ ಬೇಲಿಗಳಿಂದ ಆವೃತವಾಗಿವೆ. ಅದರಿಂದ ಮಕ್ಕಳಿಗೆ ಆಟವಾಡಲು ಅವಕಾಶ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಹಿಂದೆ ಮಕ್ಕಳು ಶಾಲೆಯಿಂದ ಮನೆಗೆ ಬಂದು ಬ್ಯಾಗ್ ಇಟ್ಟು ಸ್ನೇಹಿತರೊಂದಿಗೆ ಆಟವಾಡಲು ತೆರಳುತ್ತಿದ್ದರು. ಯಾವ ಸಮಯಕ್ಕೆ ಮನೆಗೆ ಮರಳುತ್ತಾರೆಂಬುದರ ಬಗ್ಗೆ ತಂದೆ-ತಾಯಿಗೂ ಆತಂಕ ಕಡಿಮೆ ಇತ್ತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳ ಸುರಕ್ಷತೆ ಬಗ್ಗೆ ಪಾಲಕರು ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ. ಆದ್ದರಿಂದ ಸುರಕ್ಷಿತ ಕ್ರೀಡಾಂಗಣಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದರು.

ಭಾರತದಲ್ಲಿ ಯುವ ಜನರ ಪ್ರಮಾಣ ಹೆಚ್ಚಿದೆ. ಇದು ದೇಶದ ಬಹುದೊಡ್ಡ ಸಂಪತ್ತು. ಯುವಕರು ತಮ್ಮ ಶಕ್ತಿ, ಸಮಯ ಹಾಗು ಪ್ರತಿಭೆಯನ್ನು ಸಕಾರಾತ್ಮಕವಾಗಿ ಬಳಸಿಕೊಂಡರೆ ದೇಶವನ್ನು ಮತ್ತಷ್ಟು ಬಲಿಷ್ಟಗೊಳಿಸಬಹುದು. ಶಿಕ್ಷಣದ ಜೊತೆಗೆ ಕ್ರೀಡೆ, ಸಾಮಾಜಿಕ ಸೇವೆ, ಧಾರ್ಮಿಕ ಹಾಗು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಅವಕಾಶಗಳಿವೆ ಎಂದರು.

ಭಾರತದಲ್ಲಿ ಜನಿಸಿರುವುದೇ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ವಿಶ್ವದ ಹಲವು ರಾಷ್ಟ್ರಗಳ ಪರಿಸ್ಥಿತಿಯನ್ನು ಗಮನಿಸಿದಾಗ ಭಾರತವು ಶಾಂತಿ, ಪ್ರಗತಿ ಹಾಗು ಭದ್ರತೆಯ ದೃಷ್ಟಿಯಿಂದ ಬಲಿಷ್ಟ ರಾಷ್ಟ್ರವಾಗಿ ಬೆಳೆದಿದೆ. ದೇಶ ನಮಗೆ ನೀಡಿರುವ ಅವಕಾಶಗಳು ಮತ್ತು ಸೌಲಭ್ಯಗಳ ಬಗ್ಗೆ ಪ್ರತಿಯೊಬ್ಬರೂ ಕೃತಜ್ಞತೆಯ ಭಾವನೆ ಹೊಂದಬೇಕೆಂದರು.

ನಾವು ಕಲಿತ ವಿದ್ಯೆ ಕೇವಲ ಉದ್ಯೋಗ ಪಡೆದು ಸಂಬಳ ಪಡೆಯುವುದಕ್ಕೆ ಸೀಮಿತವಾಗ ಬಾರದು. ತಾವು ಪಡೆದ ಜ್ಞಾನ ಹಾಗು ಶಿಕ್ಷಣವನ್ನು ಸಮಾಜದ ಬಡವರು, ಹಿಂದುಳಿದವರು ಸೇರಿ ದೇಶದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಗೆ ಬಳಸಿದಾಗ ಮಾತ್ರ ಜೀವನ ಸಾರ್ಥಕವಾ ಗುತ್ತದೆ. ಪ್ರತಿಯೊಬ್ಬರ ಮನಸ್ಸಿನಲ್ಲಿ ಮೊದಲು ದೇಶದ ಬಗ್ಗೆ ಅಭಿಮಾನ ಮತ್ತು ಕರ್ತವ್ಯದ ಭಾವನೆ ಮೂಡಬೇಕು. ತಂದೆ-ತಾಯಿ ಎಷ್ಟು ಮುಖ್ಯವೋ, ನಮ್ಮೆಲ್ಲರನ್ನೂ ಬೆಳೆಸಿದ ದೇಶವೂ ಅಷ್ಟೇ ಮಹತ್ವದ್ದಾಗಿದೆ ಎಂದು ಹೇಳಿದರು.

ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೌಡಳ್ಳಿ ಲೋಹಿತ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜಕ ಆರ್.ಮಂಜುನಾಥ್, ಸರ್ಕಾರಿ ಬಾಲಕಿಯರ ಕಾಲೇಜಿನ ಪ್ರಾಂಶುಪಾಲ ರಮೇಶ್, ಪ್ರಾಂಶುಪಾಲ ರಜನೀಶ್ ಮತ್ತಿತರರಿದ್ದರು.

## ತಹಶೀಲ್ದಾರ್ ಪಟ್ಟಿ ಬದಲಿಸಿದ ಡಿಸಿ : ಆರೋಪ

# ಮೀಸಲಾತಿ ಜಟಾಪಟಿ : ಜಿಲ್ಲಾಧಿಕಾರಿ ವಿರುದ್ಧ ರೇವಣ್ಣ ಕಿಡಿ

• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ಮೀಸಲಾತಿ ಅಧಿಸೂಚನೆ ಪ್ರಕಟಿಸಿರುವ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಹಶೀಲ್ದಾರ್‌ಗಳು ಸಲ್ಲಿಸಿರುವ ಪಟ್ಟಿಯನ್ನು ಬದಲಾಯಿಸಿದ್ದು, ಚುನಾವಣಾ ಆಯೋಗ ಸಮಗ್ರ ತನಿಖೆ ನಡೆಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ಜೆಡಿಎಸ್ ಶಾಸಕರೊಂದಿಗೆ ನಡೆದ ಜಂಟಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವ ಆಧಾರದ ಮೇಲೆ ತಹಶೀಲ್ದಾರ್ ಕಳುಹಿಸಿದ್ದ ಮೀಸಲಾತಿ ಪಟ್ಟಿಯನ್ನು ಬದಲಾಯಿಸಿದ್ದಾರೆಂದು ಪ್ರಶ್ನಿಸಿದ ಅವರು, ತಹಶೀಲ್ದಾರ್ ಸರಿಯಾಗಿ ಪಟ್ಟಿ ಸಲ್ಲಿಸದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಅದನ್ನು ಬಿಟ್ಟು ಒಂದು ಗ್ರಾಮ ಪಂಚಾಯಿತಿಯ 7-8 ಕ್ಷೇತ್ರಗಳ ಮೀಸಲಾತಿಯನ್ನು ಹೇಗೆ ಬದಲಾಯಿಸಿದ್ದಾರೆಂದು ವಾಗ್ದಾಳಿ ನಡೆಸಿದರು.

ಜೆಡಿಎಸ್ ಮತದಾರರು ಹೆಚ್ಚಿರುವ ಕಡೆ ಮೀಸಲಾತಿ ಬದಲಾಯಿಸಲಾಗಿದೆ.



ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ, ಕರಡು ಪ್ರತಿಯನ್ನು ಪ್ರಕಟಿಸಬೇಕಿತ್ತು. ಯಾವ ಆಧಾರದ ಮೇಲೆ ಜಿಲ್ಲಾಧಿಕಾರಿ ಅಂತಿಮ ಮೀಸಲಾತಿ ಪ್ರಕಟಿಸಿದ್ದಾರೆಂಬುದು ತಿಳಿದಿಲ್ಲ. ಮೀಸಲಾತಿ ವಿಚಾರದಲ್ಲಿ ಚುನಾವಣಾ ಆಯೋಗದ ಗಮನ ಸೆಳೆಯಲಾಗುವುದು. ಅಗತ್ಯವಿದ್ದರೆ ನ್ಯಾಯಾಲಯದ ಮೆಟ್ಟಿಲೇರುವುದಾಗಿಯೂ ತಿಳಿಸಿದರು.

ತಹಶೀಲ್ದಾರ್ ಕಳುಹಿಸಿದ್ದ ಮೀಸಲಾತಿ ಪಟ್ಟಿಯಲ್ಲಿ ಮಳಲಿ ಗ್ರಾಮ ಪಂಚಾಯಿತಿಯಲ್ಲಿ 6 ಬದಲಾವಣೆ ಮಾಡಿದ್ದಾರೆ. ಅದೇ ರೀತಿ ದೊಡ್ಡ ಕುಂಚೇವುನಲ್ಲಿ 9, ಹರಿಹರಪುರ 4, ಹಳೇಕೋಟೆ 6, ಹಂಗರಹಳ್ಳಿ 5, ವಡ್ಡರಪಾಳ್ಯ 4, ಬಾಗಿವಾಳು 8, ಕೋಡಿಹಳ್ಳಿ 5, ಮೂಡಲಹಿಪ್ಪೆ 3, ಮಾರಗೋಡನಹಳ್ಳಿ 4, ದೊಡ್ಡ ಗೇಣಿಗೆರೆ 4, ದೊಡ್ಡಕಾಡನೂರು 7, ಶ್ರವಣೂರಿನಲ್ಲಿ 11, ಹಳ್ಳಿಮೈಸೂರು 7 ಹೀಗೆ ಮೀಸಲಾತಿ ಪಟ್ಟಿಯನ್ನೇ ಬದಲಾವಣೆ ಮಾಡಿದ್ದಾರೆಂದು ದೂರಿದರು.

ಕಾಂಗ್ರೆಸ್‌ನವರು ಕೇಂದ್ರದಲ್ಲಿರುವ ಚುನಾವಣಾ ಆಯೋಗ ಬಿಜೆಪಿ ಏಜೆಂಟ್ ಎಂದು ಆಪಾದಿಸುತ್ತಾರೆ. ಹಾಗಾದರೆ ಇಲ್ಲಿರುವ ಚುನಾವಣಾ ಆಯೋಗ ಯಾರ ಏಜೆಂಟ್ ಎಂದು ಪ್ರಶ್ನಿಸಿದರು.

ಅಧಿಕಾರಿಗಳು ರಾಜಕೀಯ ಒತ್ತಡಕ್ಕೆ ಮಣಿದು ಕಾರ್ಯ ನಿರ್ವಹಿಸಬಾರದು. ತಹಶೀಲ್ದಾರ್ ನೀಡಿರುವ ವರದಿಯನ್ನು ಬದಿಗೊತ್ತಿ, ರಾಜಕೀಯ ಒತ್ತಡಕ್ಕೆ ಮಣಿದು ಜಿಲ್ಲಾಧಿಕಾರಿಯೇ ಮೀಸಲಾತಿ ಬದಲಾವಣೆ ಮಾಡಿದ್ದಾರೆ. ನನ್ನ 30 ವರ್ಷದ ರಾಜಕೀಯ ಜೀವನದಲ್ಲಿ ಇಂತಹ ಜಿಲ್ಲಾಧಿಕಾರಿಯನ್ನು ನೋಡಿಲ್ಲ ಎಂದ ಅವರು, ಹಾಸನ ತಹಶೀಲ್ದಾರ್ ವಿರುದ್ಧವೂ ವಾಗ್ದಾಳಿ ನಡೆಸಿ, ಕಡೂರಿನಲ್ಲಿ ಅಮಾನತುಗೊಂಡು ಜೈಲಿಗೆ ಹೋಗಿ ಬಂದವರನ್ನು ಹಾಸನದಲ್ಲಿ ಕೆಲಸಕ್ಕೆ ನಿಯೋಜಿಸಲಾಗಿದೆ. ಇಂತಹ ಅಧಿಕಾರಿಗಳನ್ನು ಲೂಟಿ ಹೊಡೆಯಲು ಇಟ್ಟುಕೊಂಡಿದ್ದಾರೆಯೇ ಎಂದು ಪ್ರಶ್ನಿಸಿದರು.

ಶಾಸಕರಾದ ಎ.ಮಂಜು, ಹೆಚ್.ಪಿ. ಸ್ವರೂಪ್, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಇದ್ದರು.

### ವಾರದ ಗಡುವು: ಕಚೇರಿಗೆ ಮುತ್ತಿಗೆ ಎಚ್ಚರಿಕೆ

ಮೀಸಲಾತಿ ಪಟ್ಟಿಯನ್ನು ಸರಿಪಡಿಸದಿದ್ದರೆ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದ ಅವರು, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಗುವುದು. ಬಳಿಕ ಒಂದು ವಾರದ ಗಡುವು ನೀಡಲಾಗುವುದು. ಪಟ್ಟಿಯಲ್ಲಿ ತಿದ್ದುಪಡಿ ಮಾಡದಿದ್ದರೆ ನಾಲ್ವರು ಜೆಡಿಎಸ್ ಶಾಸಕರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಪ್ರತಿಭಟನೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆದರೂ ಜಿಲ್ಲಾಧಿಕಾರಿಯೇ ನೇರ ಹೊಣೆ ಎಂದು ಎಚ್ಚರಿಸಿದರು.
ಜಿಲ್ಲಾಧಿಕಾರಿ ಶಾಶ್ವತವಾಗಿ ಕಾಂಗ್ರೆಸ್ ಸರ್ಕಾರವೇ ಇರುತ್ತದೆಂದು ಭಾವಿಸಿದ್ದರೆ ಅದು ತಪ್ಪು. ಇನ್ನೊಂದು ವರ್ಷ ಕಾಂಗ್ರೆಸ್ ಸರ್ಕಾರ ಇರಬಹುದು. 2028ರಲ್ಲಿ ಏನಾಗುತ್ತದೆಂಬುದನ್ನು ಕಾದು ನೋಡೋಣ. ಅಧಿಕಾರದ ದರ್ಪ ಎಷ್ಟು ದಿನ ನಡೆಯುತ್ತದೆ ನೋಡೋಣ ಎಂದು ಸವಾಲು ಹಾಕಿದರು.

# ಹಿರಿಗರ್ಜೆಯಲ್ಲಿ ಬೆಳ್ಳಂ ಬೆಳಿಗ್ಗೆ ಕಾಡಾನೆ ಹಿಂಡು ಪ್ರತ್ಯಕ್ಷ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಹಿರಿಗರ್ಜೆ ಗ್ರಾಮದಲ್ಲಿ ಶನಿವಾರ ಬೆಳ್ಳಂ ಬೆಳಿಗ್ಗೆ 40ಕ್ಕೂ ಅಧಿಕ ಕಾಡಾನೆಗಳ ಹಿಂಡು ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಜಮೀನುಗಳ ಮೂಲಕ ಒಂದರ ಹಿಂದೆ ಒಂದರಂತೆ ಸಾಲಾಗಿ ಸಾಗಿದ ಕಾಡಾನೆಗಳ ಹಿಂಡಿನಲ್ಲಿ ಮರಿಗಳ ಸಂಖ್ಯೆಯೇ ಹೆಚ್ಚಿತ್ತು. ಜಮೀನು ಕೆಲಸಕ್ಕೆ ತೆರಳುತ್ತಿದ್ದ ರೈತರು ಕಾಡಾನೆಗಳ ಹಿಂಡು ಕಂಡು ಆತಂಕಗೊಂಡು ಮನೆಗೆ ವಾಪಾಸ್ಸಾಗಿದ್ದಾರೆ. ಕಾಡಾನೆಗಳ ಗುಂಪು ಜಮೀನಿನಲ್ಲಿ ಸಂಚರಿಸುವ ವೇಳೆ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.



ಕಾಡಾನೆಗಳು ಒಟ್ಟಾಗಿ ಸಾಗುತ್ತಿರುವ ದೃಶ್ಯವನ್ನು ಸ್ಥಳೀಯರು ತಮ್ಮ ಮೊಬೈಲ್‌ಗಳಲ್ಲಿ ಸೆರೆಹಿಡಿದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹರಿದಾಡುತ್ತಿದೆ. ಕಾಡಾನೆಗಳ ಹಿಂಡು ಗ್ರಾಮಗಳ ಸಮೀಪ ನಿರಂತರವಾಗಿ ಕಾಣಿಸಿಕೊಳ್ಳುತ್ತಿರುವ ಹಿನ್ನಲೆ ಅರಣ್ಯ ಇಲಾಖೆ ಸೂಕ್ತ ಕ್ರಮ ಕೈಗೊಂಡು ರೈತರ ಬೆಳೆ ಹಾಗು ಜೀವ ರಕ್ಷಣೆಗೆ ಮುಂದಾಗಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಯುವತಿ ಆತ್ಮಹತ್ಯೆ: ಕಿರುಕುಳ ಶಂಕೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣದ ಅಂಬಿಕಾ ನಗರದಲ್ಲಿ ಯುವತಿಯೊಬ್ಬಳು ನೇಣಿಗೆ ಶರಣಾಗಿದ್ದು, ಪ್ರಿಯಕರನ ಕಿರುಕುಳವೇ ಕಾರಣವೆಂದು ಶಂಕೆ ವ್ಯಕ್ತವಾಗಿದೆ. ರಚಿತಾ (19) ಮೃತರು.

ಸಾಕಮ್ಮ-ಮಂಜಶೆಟ್ಟಿ ದಂಪತಿಯ ಪುತ್ರಿ ರಚಿತಾ, ಪ್ರಥಮ ಬಿಎ ಓದುತ್ತಿದ್ದಳು. ಕಳೆದ ಒಂದೂವರೆ ವರ್ಷದಿಂದ ಪಟ್ಟಣದ ರೇಣುಕಾಂಬ ರಸ್ತೆಯ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದ ನವೀನ್ ಎಂಬ ಯುವಕನನ್ನು ಪ್ರೀತಿಸುತ್ತಿದ್ದಳು. ರಚಿತಾ ಅವರ ತಾಯಿ ಸಾಕಮ್ಮ ಕೂಡ ಇದೇ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ತಮ್ಮ ಪ್ರೀತಿಯ ವಿಚಾರವನ್ನು ಸಾಕಮ್ಮ ಅವರ ಗಮನಕ್ಕೆ ತಂದಿದ್ದು, ಮದುವೆ ಮಾಡಿಕೊಡುವುದಾಗಿ ಸಾಕಮ್ಮ ಹೇಳಿದ್ದರೆಂದು ಕುಟುಂಬದವರು ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನವೀನ್ ರಚಿತಾಳಿಗೆ ಕಿರುಕುಳ ನೀಡುತ್ತಿದ್ದ ಎಂದು ಸಾಕಮ್ಮ ಆರೋಪಿ ಸಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಜಿಲ್ಲಾ ನ್ಯಾಯಾಧೀಶೆ ಹೇಮಾವತಿ ಸಲಹೆ | ಹೆರಗು ಗ್ರಾಮದಲ್ಲಿ ಕಾನೂನು ಕಾರ್ಯಾಗಾರ

# ಪ್ರಾರಂಭಿಕ ಹಂತದಲ್ಲೇ ವ್ಯಾಜ್ಯ ಪರಿಹರಿಸಿಕೊಳ್ಳಲು ಪ್ರಯತ್ನಿಸಿ

• ಪ್ರಜೋದಯ ವರದಿ

**ಹಾಸನ:** ಮಾನವನ ದುರಾಸೆ ಹಾಗು ಇನ್ನೊಬ್ಬರ ಹಕ್ಕು ಕಸಿಯುವುದರಿಂದ ವ್ಯಾಜ್ಯಗಳು ಉದ್ಭವವಾಗುತ್ತವೆ. ಅಂತಹ ಸಮಸ್ಯೆಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಇತ್ಯರ್ಥಪಡಿಸಿ ಕೊಂಡು ಉತ್ತಮ ಬದುಕು ಕಟ್ಟಿಕೊಳ್ಳುವುದು ಎಲ್ಲರ ಆದ್ಯತೆಯಾಗಬೇಕೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ಹೇಳಿದರು.

ತಾಲ್ಲೂಕಿನ ಹೆರಗು ಗ್ರಾಮ ಪಂಚಾಯಿತಿ ಆವರಣದಲ್ಲಿ ಶನಿವಾರ ನಡೆದ ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆ, ಸರ್ಕಾರಿ ಯೋಜನೆ ಹಾಗು ಜಾಗೃತಿ ಯೋಜನೆ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪರಸ್ಪರ ಹೊಂದಾಣಿಕೆ, ವಿಶ್ವಾಸ, ನಂಬಿಕೆಗಳು ಇದ್ದಾಗ ಮಾತ್ರ ವ್ಯಾಜ್ಯವಿಲ್ಲದೆ ಬದುಕಲು ಸಾಧ್ಯವಿದೆ. ಗ್ರಾಮಗಳಲ್ಲಿ ಉದ್ಭವಿಸುವ ಸಿವಿಲ್ ವ್ಯಾಜ್ಯಗಳು ಸೌಹಾರ್ದಯುತವಾಗಿ ಪ್ರಾರಂಭಿಕ ಹಂತದಲ್ಲಿಯೇ ಮುಕ್ತಾಯಗೊಳ್ಳಬೇಕು. ಎಲ್ಲರೂ ಹೃದಯ



ವೈಶಾಲ್ಯತೆ ಮೆರೆಯಬೇಕು. ಪರಸ್ಪರರನ್ನು ಗೌರವಿಸುವ ಗುಣ ಅಳವಡಿಸಿಕೊಳ್ಳಬೇಕು. ಆಗಮಾತ್ರ ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆ ಸಾಕಾರಗೊಳ್ಳುತ್ತದೆಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ವ್ಯಾಜ್ಯ ಮುಕ್ತ ಗ್ರಾಮದ ಪರಿಕಲ್ಪನೆಯಲ್ಲಿ ಸಂಧಾನ ಮತ್ತು ರಾಜಿಸೂತ್ರ ಪ್ರಮುಖ ಪಾತ್ರ ವಹಿಸುತ್ತದೆ. ವ್ಯಾಜ್ಯಗಳನ್ನು ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಹಿಂದಿನ ಕಾಲದ ಪಂಚಾಯಿತಿಯ ಪರಿಕಲ್ಪನೆಯಲ್ಲಿಯೇ ವ್ಯಾಜ್ಯ ಮುಕ್ತ ಗ್ರಾಮ ಪರಿಕಲ್ಪನೆಯನ್ನು ರೂಪಿಸಿದ್ದು ಬಗೆಹರಿಸಬಹುದಾದ ಸಿವಿಲ್ ಪ್ರಕರಣಗಳು ಚಿಕ್ಕಪುಟ್ಟ ವೈಮನಸುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಉಚಿತವಾಗಿ ಕಾನೂನು ಸಲಹೆ, ನೆರವು ಅರಿವನ್ನು ಜನರಿಗೆ ನೀಡುತ್ತಿದೆ.

ತಾಲ್ಲೂಕಿನ ಹೆರಗು ಪಂಚಾಯಿತಿಯನ್ನು ವ್ಯಾಜ್ಯ ಮುಕ್ತ ಗ್ರಾಮವನ್ನಾಗಿ ನಿರ್ಮಾಣ ಮಾಡಲು ಆಯ್ಕೆ ಮಾಡಿಕೊಳ್ಳಲಾಗಿದ್ದು ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುತ್ತಿವೆ ಎಂದರು.

ಅಪರ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಅವರು ಮಾತನಾಡಿ, ಅಪರಾಧ ಪ್ರಕರಣ ಕಡಿಮೆಯಾಗಲು ಪ್ರತಿಯೊಬ್ಬರು ಶ್ರಮ ವಹಿಸಬೇಕು. ವ್ಯಾಜ್ಯ ಮುಕ್ತ ಗ್ರಾಮವಾಗಲೂ ಎಲ್ಲರೂ ಸಹಕಾರ ನೀಡಬೇಕು. ಆಸ್ತಿ ವಿಚಾರವಾಗಿ ಹಳ್ಳಿಗಳಲ್ಲಿ ಅಪರಾಧ ಕೃತ್ಯ ಹೆಚ್ಚುತ್ತಿವೆ. ಸಂಬಂಧಗಳು ವಿಘಟಿತವಾಗುತ್ತಿವೆ. ಕೇವಲ ಪರಿಕಲ್ಪನೆಯಲ್ಲಿ ಮಾತ್ರವೇ ವ್ಯಾಜ್ಯ ಮುಕ್ತ ಎಂಬ ಪದ ಬಳಕೆಯಾಗದೆ ನಿಜರೂಪದಲ್ಲಿ ಸಹಕಾರಗೊಳ್ಳಬೇಕೆಂದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಅವರು ಮಾತನಾಡಿ, ಗ್ರಾಮೀಣ ಭಾರತದ ಸಾಂಪ್ರದಾಯಿಕ ಪಂಚಾಯತ್ ವ್ಯವಸ್ಥೆಯಲ್ಲಿ ಇದ್ದಂತಹ ಸೌಹಾರ್ದತೆ ಇತ್ತೀಚಿನ ದಿನಗಳಲ್ಲಿ ಕಳೆದು» ನಾಲ್ಕನೇ ಪುಟದಲ್ಲಿ

# ಆಕ್ಷೇಪಣೆಗೆ ಅವಕಾಶ ನೀಡದೆ ಮೀಸಲಾತಿ ಅಧಿಸೂಚನೆ

## ಕಾನೂನು ಪಾಲನೆ ಮಾಡದೆ ಏಕಾಏಕಿ ಪ್ರಕಟ: ಎ.ಮಂಜು ಆರೋಪ

• ಪ್ರಜೋದಯ ವರದಿ



**ಹಾಸನ:** ಗ್ರಾಮ ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ಅಧಿ ಸೂಚನೆಯಲ್ಲಿ ಭಾರೀ ಲೋಪವಾಗಿದೆ. ಆಕ್ಷೇಪಣೆ ಸಲ್ಲಿಕೆಗೆ ಅವಕಾಶ ನೀಡದೆ ಏಕಾಏಕಿ ಪ್ರಕಟಿಸಲಾಗಿದೆ ಎಂದು ಮಾಜಿ ಸಚಿವ ಎ.ಮಂಜು ಅವರು ಆರೋಪಿಸಿದರು.

ಶನಿವಾರ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಗಾಗಿ ಮೀಸಲಾತಿ ಪ್ರಕ್ರಿಯೆ ನಡೆಯುತ್ತಿದೆ. ಮೀಸಲಾತಿ ಅಧಿಸೂಚನೆ ಅಂತಿಮ ಗೊಳಿಸುವ ಮೊದಲು ಸಮಯ ನೀಡಿ ಆಕ್ಷೇಪಣೆ ಕೇಳಿ, ಲೋಪವಾಗಿದ್ದರೆ ಸರಿಪಡಿಸಿ ಕೊಳ್ಳಬೇಕು. ಜಿಲ್ಲೆಯಲ್ಲಿ ಕಾನೂನು ಪಾಲನೆ ಮಾಡದೆ ಏಕಾಏಕಿ ಅಧಿಸೂಚನೆ ಪ್ರಕಟ ಮಾಡಲಾಗಿದೆ ಎಂದು ದೂರಿದರು.

ನಮ್ಮ ಬಳಿ ಹಿಂದೆ ಇದ್ದ ಮೀಸಲಾತಿ ಪಟ್ಟಿ ಹಾಗು ಈಗ ಪ್ರಕಟವಾಗಿರುವ ಪಟ್ಟಿ ಕೂಡ ಇದೆ. ಹಿಂದಿನ ಮೀಸಲಾತಿ ಮರುಕಳಿಸಬಾರದೆಂಬ ಕಾನೂನಿದೆ. ಅದನ್ನು ಪಾಲಿಸದೆ ಅಧಿಸೂಚನೆ ಹೊರಡಿಸಿದ್ದಾರೆ. ಹೀಗಾಗಿ ಕರಡು ಪ್ರತಿಯಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಮಾಡಿಕೊಡ ಬೇಕೆಂದು ಒತ್ತಾಯಿಸಿದರು.

ಅರಕಲಗೂಡು ತಾಲ್ಲೂಕಿನ ಬಸವನಹಳ್ಳಿಯಲ್ಲಿ ಮೂರು ಕ್ಷೇತ್ರಗಳಿವೆ. ಆ ಮೂರು ಕ್ಷೇತ್ರ ಗಳನ್ನು ಮಹಿಳೆಯರಿಗೆ ನೀಡಲಾಗಿದೆ. ಕೆಲವು ಕಡೆಗಳಲ್ಲಿ ಅನುಸೂಚಿತ ಜಾತಿಯನ್ನು ಪರಿಗಣಿಸಲಾಗಿದೆ. ಮೀಸಲಾತಿ ಪುನರಾವರ್ತನೆಯಾಗಬಾರದೆಂಬುದು ನಮ್ಮ ಆಗ್ರಹವಾಗಿದೆ. ಮೀಸಲಾತಿ ನಿಗದಿ ಮಾಡಿರುವುದು ತಪ್ಪಿದೆ, ಪುನರಾವರ್ತನೆಯಾಗಿರು ವುದು ತಪ್ಪಿದೆ ಎಂದರು.

ಅಧಿಸೂಚನೆ ಪ್ರಕಟಿಸುವ ಮೊದಲು ಆಯಾ ಗ್ರಾಮ ಪಂಚಾಯಿತಿ ಕಚೇರಿಯ ನಾಮಫಲಕದಲ್ಲಿ ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಬೇಕಿತ್ತು. ಇದ್ಯಾವುದನ್ನೂ ಪಾಲಿಸದೆ, ಯಾರನ್ನೂ ಕೇಳದೆ ನೇರವಾಗಿ ಪ್ರಕಟ ಮಾಡಲಾಗಿದೆ. ಜಿಲ್ಲಾಧಿಕಾರಿ, ಸರ್ಕಾರ ಕೂಡಲೇ ಕರಡು ಪ್ರತಿಯನ್ನು ಬಿಡುಗಡೆ ಮಾಡಿ, ಆಕ್ಷೇಪಣೆಗಳನ್ನು ಸ್ವೀಕಾರ ಮಾಡಬೇಕೆಂದು ಒತ್ತಾಯಿಸಿದರು.

> ಮೀಸಲಾತಿ ಅಧಿಸೂಚನೆಯಲ್ಲಿ ಹಾಸನ ಕ್ಷೇತ್ರದ ಹಲವು ಗ್ರಾಮ ಪಂಚಾಯಿತಿಗಳಲ್ಲಿ ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿ ಲೋಪ ಎಸಗಿದ್ದಾರೆ. ಆಗಿರುವ ತಪ್ಪನ್ನು ಕೂಡಲೇ ಸರಿಪಡಿ ಸದಿದ್ದರೆ ಹೆಚ್.ಡಿ.ರೇವಣ್ಣ ಅವರ ನೇತೃತ್ವದಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಲಾಗುವುದು.
> -ಹೆಚ್.ಪಿ.ಸ್ವರೂಪ್, ಶಾಸಕ

C M Y K C M Y K C M Y K C M Y K

> ದೇಶದಲ್ಲಿ ಗುಟ್ಕಾ ಹಾಗೂ ಪಾನ್ ಮಸಾಲಾ ನಿಷೇಧ ಜಾರಿಯಾಗಿ ಒಂದೂವರೆ ದಶಕವೇ ಕಳೆದಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ 2011ರ ಆಗಸ್ಟ್‌ನಲ್ಲಿ ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣ ಮಟ್ಟ ಕಾಯ್ದೆ 2006ರಡಿ ಹೊರಡಿಸಲಾದ ಆದೇಶದಡಿ ಯಾವುದೇ ಆಹಾರ ಉತ್ಪನ್ನಗಳಲ್ಲಿ ತಂಬಾಕು ಮತ್ತು ನಿಕೋಟಿನ್ ಅನ್ನು ಕಚ್ಚಾವಸ್ತುವಾಗಿ ಬಳಸುವಂತಿಲ್ಲ. ಸದ್ಯ ರಾಜ್ಯ ಆರೋಗ್ಯ ಇಲಾಖೆ ಹೊರಡಿಸಿರುವುದು ವಾರ್ಷಿಕ ನಿಷೇಧ ನವೀಕರಣದ ಆದೇಶವನ್ನೇ ಹೊರತು, ಇದೇ ಮೊದಲ ಬಾರಿಗೆ ನಿಷೇಧ ಹೇರುತ್ತಿರುವುದಲ್ಲ.

# ಕರ್ನಾಟಕದಲ್ಲೊಂದು ಗುಟ್ಕಾ ನಿಷೇಧ ಪ್ರಹಸನ!






ಲೋಕಮತ

ಕರ್ನಾಟಕದಲ್ಲಿ ಕಳೆದ ಒಂದು ವಾರದಿಂದೀಚೆಗೆ ಗುಟ್ಕಾ ಮತ್ತು ಪಾನ್‌ಮಸಾಲಾ ನಿಷೇಧದ ವಿಚಾರದಲ್ಲಿ ದೊಡ್ಡ ಮಟ್ಟದ ಪ್ರಹಸನವೊಂದು ನಡೆಯುತ್ತಿದೆ. ವಿಪರ್ಯಾಸ ಎಂದರೆ ಮುಖ್ಯ ಮಂತ್ರಿಗಳು, ಆರೋಗ್ಯ ಸಚಿವರು, ಅಡಕೆ ಬೆಳೆಯುವ ಪ್ರದೇಶದ ಜನಪ್ರತಿನಿಧಿಗಳು, ಮಾಧ್ಯಮಗಳು, ಸೋಶಿಯಲ್ ಮೀಡಿಯಾ ಸೇರಿ ಎಲ್ಲರೂ ಈ ಪ್ರಹಸನದಲ್ಲಿ ಭಾಗಿಗಳಾಗಿದ್ದಾರೆ!

ಕಳೆದ ವಾರ ರಾಜ್ಯ ಸರಕಾರದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು (ಆರೋಗ್ಯ ಇಲಾಖೆ) ರಾಜ್ಯಾದ್ಯಂತ ತಂಬಾಕು ಮತ್ತು ನಿಕೋಟಿನ್ ಅಂಶವಿರುವ ಗುಟ್ಕಾ ಹಾಗೂ ಪಾನ್ ಮಸಾಲಾದ ಉತ್ಪಾದನೆ, ಸಂಗ್ರಹಣೆ, ಸಾಗಾಟ ಮತ್ತು ಮಾರಾಟವನ್ನು ಒಂದು ವರ್ಷದ ಮಟ್ಟಿಗೆ ನಿಷೇಧಿಸಿ ಆದೇಶ ಹೊರಡಿಸಿತ್ತು. ತಕ್ಷಣವೇ ಅಡಕೆ ಬೆಳೆಯುವ ಪ್ರದೇಶದ ಜನಪ್ರತಿನಿಧಿಗಳು, ಸಿಎಂ ಡಿಕೆಶಿ ಅವರನ್ನು ಭೇಟಿ ಮಾಡಿ ಈ ಆದೇಶವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದ್ದರು.

ಮರುದಿನವೇ ಮಲೆನಾಡು ಮತ್ತು ಕರಾವಳಿ ಭಾಗದ ಅಡಕೆ ಬೆಳೆಗಾರರ ಹಿತದೃಷ್ಟಿಯಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಆದೇಶವನ್ನು ವಾಪಸ್ ಪಡೆದಿದ್ದಾರೆಂದು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ, ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಗುಟ್ಕಾ ನಿಷೇಧ ಆದೇಶವನ್ನು ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ್ದರು.

ತಂಬಾಕು ಮತ್ತು ನಿಕೋಟಿನ್ ಮಿಶ್ರಿತ ಗುಟ್ಕಾ ಸೇವನೆಯು ಬಾಯಿ ಕ್ಯಾನ್ಸರ್, ಹೃದಯ ಕಾಯಿಲೆಗಳಂತಹ ಮಾರಣಾಂತಿಕ ರೋಗಗಳಿಗೆ ಪ್ರಮುಖ ಕಾರಣವಾಗಿದೆ. ನಿಷೇಧವನ್ನು ವಿರೋಧಿಸುವ ಜನಪ್ರತಿನಿಧಿಗಳು ಒಮ್ಮೆ ಕಿದ್ವಾಯಿ ಆಸ್ಪತ್ರೆಗೆ ಭೇಟಿ ನೀಡಿ ಕ್ಯಾನ್ಸರ್ ರೋಗಿಗಳ ಪರದಾಟವನ್ನು ಕಣ್ಣಾರೆ ನೋಡಲಿ ಎಂದು ಸಚಿವರು ತಿರುಗೇಟು ನೀಡಿದ್ದರು. ಆದರೆ ವಾಸ್ತವ ಬೇರೆಯೇ ಇದೆ.

ಇಡೀ ದೇಶದಲ್ಲಿ ಗುಟ್ಕಾ ಹಾಗೂ ಪಾನ್ ಮಸಾಲಾ ನಿಷೇಧ ಜಾರಿಯಾಗಿ 13 ವರ್ಷಗಳೇ ಕಳೆದಿವೆ. ಸುಪ್ರೀಂ ಕೋರ್ಟ್ ನೀಡಿದ ಕಟ್ಟುನಿಟ್ಟಿನ ನಿರ್ದೇಶನದ ಮೇರೆಗೆ ಭಾರತದ ಎಲ್ಲಾ 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ತಂಬಾಕು ಮತ್ತು ನಿಕೋಟಿನ್‌ಯುಕ್ತ ಗುಟ್ಕಾ ಹಾಗೂ ಪಾನ್ ಮಸಾಲಾವನ್ನು ಅಧಿಕೃತವಾಗಿ ನಿಷೇಧಿಸಲಾಗಿದೆ.

2011ರ ಆಗಸ್ಟ್‌ನಲ್ಲಿ ಕೇಂದ್ರ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರಡಿ ಹೊರಡಿಸಲಾದ ಆದೇಶದಡಿ ಯಾವುದೇ ಆಹಾರ ಉತ್ಪನ್ನಗಳಲ್ಲಿ ತಂಬಾಕು ಮತ್ತು ನಿಕೋಟಿನ್ ಅನ್ನು ಕಚ್ಚಾವಸ್ತುವಾಗಿ ಬಳಸುವಂತಿಲ್ಲ. ಗುಟ್ಕಾ ಮತ್ತು ಪಾನ್ ಮಸಾಲಾವನ್ನು ಬಾಯಿಯಲ್ಲಿ ಅಗಿದು ತಿನ್ನುವುದರಿಂದ ಸುಪ್ರೀಂ ಕೋರ್ಟ್ ಇದನ್ನು ಆಹಾರ ಎಂದೇ ಪರಿಗಣಿಸಿದೆ. ಅಂದರೆ, ಕಾಗದದ ಮೇಲಿನ ಕಾನೂನಿನ ಪ್ರಕಾರ ಇದು ದೇಶಾದ್ಯಂತ ಜಾರಿಯಲ್ಲಿದೆ.

ಜಾರಿಯಾಗದ ಯಾವುದೇ ರಾಜ್ಯ ಭಾರತದಲ್ಲಿಲ್ಲ . ಆದರೆ ಕದ್ದುಮುಚ್ಚಿ ಮಾರಾಟ, ಟ್ವಿನ್ ಪ್ಯಾಕ್ ತಂತ್ರಗಳ ಮೂಲಕ ಕಳ್ಳದಾರಿ ಹಿಡಿಯುವುದು ಎಲ್ಲಾ ರಾಜ್ಯಗಳಲ್ಲೂ ನಡೆಯುತ್ತಿದೆ. ಕರ್ನಾಟಕದ ವಿಷಯಕ್ಕೆ ಬಂದರೆ 2013ರ ಮೇ ತಿಂಗಳಲ್ಲಿ ಇಲ್ಲೂ ಗುಟ್ಕಾ ಮತ್ತು ಪಾನ್ ಮಸಾಲಾ ಮಾರಾಟವನ್ನು ಇಲ್ಲೂ ಅಧಿಕೃತವಾಗಿ ನಿಷೇಧಿಸಲಾಗಿತ್ತು.

ಹೀಗಾಗಿ ತಂಬಾಕು ಮತ್ತು ನಿಕೋಟಿನ್‌ಯುಕ್ತ ಗುಟ್ಕಾ ಮತ್ತು ಪಾನ್‌ಮಸಾಲಾಕ್ಕೆ ನಿಷೇಧ ಆದೇಶ ಎಂದಾಕ್ಷಣ ಯಾರೂ ಬೆಚ್ಚಿ ಬೀಳುವ ಅಗತ್ಯವೇ ಇರಲಿಲ್ಲ. ಹಾಗಾದರೆ ಈಗೇಕೆ ಮತ್ತೆ ಒಂದು ವರ್ಷದ ಮಟ್ಟಿಗೆ ನಿಷೇಧ ಎಂಬ ಹೊಸ ಆದೇಶ ಹೊರಬಿದ್ದಿದೆ? ಇದಕ್ಕೆ ಒಂದು ತಾಂತ್ರಿಕ/ಕಾನೂನಾತ್ಮಕ ಕಾರಣವಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006 ರ ಸೆಕ್ಷನ್ 30(2) (ಎ) ಅನ್ವಯ, ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದ ಆಹಾರ ಸುರಕ್ಷತಾ ಆಯುಕ್ತರು ಯಾವುದೇ ಆಹಾರ ವಸ್ತುವನ್ನು ನಿಷೇಧಿಸಬಹುದು.

ಆದರೆ, ಈ ಅಧಿಕಾರದ ಅಡಿಯಲ್ಲಿ ಹೊರಡಿಸುವ ಯಾವುದೇ ನಿಷೇಧ ಆದೇಶವು ಗರಿಷ್ಠ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ನಿಷೇಧವನ್ನು ಮುಂದುವರಿಸಲು ಕರ್ನಾಟಕವೂ ಸೇರಿ ಪ್ರತಿಯೊಂದು ರಾಜ್ಯಸರಕಾರವೂ ಈ ನಿಷೇಧದ ಅಧಿಸೂಚನೆಯನ್ನು ಕಡ್ಡಾಯವಾಗಿ ನವೀಕರಿಸುತ್ತಲೇ ಇರಬೇಕಾಗುತ್ತದೆ. ಸದ್ಯ ರಾಜ್ಯ ಆರೋಗ್ಯ ಇಲಾಖೆ ಹೊರಡಿಸಿರುವುದು ಇದೇ ವಾರ್ಷಿಕ ನವೀಕರಣದ ಆದೇಶವನ್ನೇ ಹೊರತು, ಇದೇ ಮೊದಲ ಬಾರಿಗೆ ನಿಷೇಧ ಹೇರುತ್ತಿರುವುದಲ್ಲ. ಕೇಂದ್ರ ಆಹಾರ ಸುರಕ್ಷತಾ ಕಾಯ್ದೆಯ ಅಡಿಯಲ್ಲಿ ಕೇಂದ್ರದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಪೂರ್ಣ ಕಾನೂನುಬದ್ಧ ಬಾಧ್ಯತೆ ರಾಜ್ಯ ಸರಕಾರಕ್ಕಿದೆ.

ಇದೇ ಕಾರಣಕ್ಕೆ ಸುಪ್ರೀಂ ಕೋರ್ಟ್ ಕೂಡ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಈ ಕಾನೂನನ್ನು ಜಾರಿಗೊಳಿಸುವಂತೆ ಈ ಹಿಂದೆ ಛೀಮಾರಿ ಹಾಕಿತ್ತು. ರಾಜ್ಯಸರಕಾರವು ಕೇಂದ್ರದ ಕಾನೂನನ್ನು ಪಾಲಿಸಲೇಬೇಕಾದ ಅನಿವಾರ್ಯತೆಯಲ್ಲಿರುವುದರಿಂದ, ಆರೋಗ್ಯ ಸಚಿವರು ಹೇಳಿದಂತೆ ಈ ನಿಷೇಧ ಆದೇಶವನ್ನು ಕಾನೂನಾತ್ಮಕವಾಗಿ ವಾಪಸ್ ಪಡೆಯುವುದು ರಾಜ್ಯಸರಕಾರಕ್ಕೆ ಅಸಾಧ್ಯದ ಮಾತಾಗಿದೆ. ಈ ಹಿನ್ನೆಲೆಯಲ್ಲಿ, ತನ್ನನ್ನು ಕೇಳದೆ ಇಂತಹ ಆದೇಶ ಹೊರಡಿಸಲಾಗಿದೆ ಎಂದು ಸಿಡಿಮಿಡಿಗೊಂಡಿದ್ದ ಸಿಎಂ ಕೂಡ ಈಗ ಮೌನ ತಾಳಿದ್ದಾರೆ. ಆದರೆ ರಾಜ್ಯ ಸರಕಾರ, ಇಲಾಖೆ, ನಮ್ಮ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಮಾಧ್ಯಮಗಳು ಸೇರಿ ಸದ್ಯದ ಮಟ್ಟಿಗೆ ಅಡಕೆ ಬೆಳೆಗಾರರನ್ನು ಮತ್ತೊಮ್ಮೆ ಆತಂಕಕ್ಕೆ ತಳ್ಳಿದ್ದಾರೆ.

ಭಾರತದ ಒಟ್ಟು ಅಡಕೆ ಉತ್ಪಾದನೆಯಲ್ಲಿ ನಮ್ಮ ರಾಜ್ಯದ ಪಾಲು ಶೇ.50ಕ್ಕಿಂತಲೂ ಹೆಚ್ಚಿದೆ. ಗುಟ್ಕಾ ಮತ್ತು ಪಾನ್ ಮಸಾಲಾದಲ್ಲಿ ಅಡಕೆಯೇ ಪ್ರಮುಖ ಕಚ್ಚಾವಸ್ತುವಾಗಿರುವುದರಿಂದ, ನಿಷೇಧದಿಂದ ಅಡಕೆಗೆ ಬೇಡಿಕೆ ಕುಸಿದು, ತಮ್ಮ ಆರ್ಥಿಕತೆ ಬುಡಮೇಲಾಗುತ್ತದೆ ಎಂಬುದು ರೈತರು ಹಾಗೂ ಮಲೆನಾಡು ಭಾಗದ ಶಾಸಕರಲ್ಲಿ ಬಲು ಹಿಂದಿನಿಂದಲೂ ಇರುವ ಆತಂಕ.

ಕಳೆದ 13 ವರ್ಷಗಳಲ್ಲಿ ಅಡಕೆಧಾರಣೆ ಏರುಗತಿಯಲ್ಲಿ ಸಾಗಿದೆಯೇ ವಿನಾ ಇಳಿಕೆ ಕಂಡಿಲ್ಲ. ಸರಕಾರದ ಆದೇಶವು ಕೇವಲ ತಂಬಾಕು ಮತ್ತು ನಿಕೋಟಿನ್ ಮಿಶ್ರಿತ ಉತ್ಪನ್ನಗಳಿಗೆ ಮಾತ್ರ ಅನ್ವಯಿಸುತ್ತದೆ. ತಂಬಾಕುರಹಿತವಾದ ಶುದ್ಧ ಪಾನ್ ಮಸಾಲಾ, ಅಡಕೆ ಪುಡಿ ಮತ್ತು ಸಾಂಪ್ರದಾಯಿಕ ತಾಂಬೂಲ ಬಳಕೆಗೆ ಯಾವುದೇ ನಿರ್ಬಂಧವಿಲ್ಲ. ಈ ನಿಷೇಧ ಆದೇಶ ಮುಂದಿಟ್ಟು ಕೊಂಡು ಮಾರುಕಟ್ಟೆಯಲ್ಲಿ ದಲ್ಲಾಳಿಗಳು ಮತ್ತು ವ್ಯಾಪಾರಸ್ಥರು ಕೃತಕವಾಗಿ ಬೆಲೆ ಇಳಿಸುವ ಪ್ರಯತ್ನಗಳನ್ನು ಆಗಾಗ ಮಾಡುತ್ತಲೇ ಇರುತ್ತಾರೆ.

### ಆತಂಕಕ್ಕೆ ಕಾರಣಗಳಿವೆ

ಆದರೆ ಅಡಕೆ ಬೆಳೆಗಾರರು ಆತಂಕಪಡಲೇಬೇಕಾದ ವಿಷಯವಿದೆ. ಸದ್ಯದ ಕಾನೂನು ಪ್ರಕಾರ ಗುಟ್ಕಾ ಜತೆ ಅಡಕೆಯೂ ಅಪರಾಧಿ ಸ್ಥಾನದಲ್ಲಿ ನಿಂತಿದೆ. ಗುಟ್ಕಾ ಜತೆಗಿನ ಸಹವಾಸದ ಕಾರಣಕ್ಕಾಗಿ ಕ್ಯಾನ್ಸರ್‌ಕಾರಕ ಎಂಬ ಪಟ್ಟ ಹೊತ್ತುಕೊಂಡ ಅಡಕೆ ಈ ಕಳಂಕದಿಂದ ಇನ್ನೂ ಮುಕ್ತವಾಗಿಲ್ಲ. ಸುಪ್ರೀಂಕೋರ್ಟ್‌ನಲ್ಲಿ ಅಡಕೆ ಉತ್ಪನ್ನಗಳ ನಿಷೇಧ ಕೋರಿದ ಅರ್ಜಿಯ ವಿಚಾರಣೆ ಇನ್ನೂ ಮುಂದುವರಿದಿದೆ. ಕೇಂದ್ರ ಸರಕಾರ 2011ರ ಆಗಸ್ಟ್‌ನಲ್ಲಿ 1954ರ ಆಹಾರ ಕಲಬೆರಕೆ ತಡೆಕಾಯಿದೆ ಯ 42ನೆ ಸೆಕ್ಷನ್‌ಗೆ ತಿದ್ದುಪಡಿ ಮಾಡಿ ಗುಟ್ಕಾ ಮತ್ತು ಪಾನ್ ಮಸಾಲದ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಿ ಹೊರಡಿಸಿದ ಆದೇಶದಲ್ಲಿ ಅಡಕೆಯ ಉಲ್ಲೇಖವೂ ಇದೆ.

ಸದ್ಯದ ಕಾನೂನು ಪ್ರಕಾರ ಗುಟ್ಕಾ ಇಲ್ಲವೇ ಪಾನ್ ಮಸಾಲ ಪ್ಯಾಕೆಟ್‌ನಲ್ಲಿ ತಂಬಾಕು ಮತ್ತು ಅಡಕೆಯನ್ನು ಮಿಶ್ರ ಮಾಡಿ ಮಾರಾಟ ಮಾಡುವುದು ಕ್ರಿಮಿನಲ್ ಅಪರಾಧ. ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳು ಈ ಆದೇಶವನ್ನು ಜಾರಿಗೆ ತಂದಿವೆ. ಅಂದರೆ ಗುಟ್ಕಾ ಜತೆ ಅಡಕೆಯೂ ಕ್ಯಾನ್ಸರ್‌ಕಾರಕ ಎಂಬ ಆರೋಪಕ್ಕೆ ಗುರಿಯಾಗಿದೆ. ಅಡಕೆ ಬೆಳೆಗಾರರ ಸಂಘದ ಒತ್ತಡಕ್ಕೆ ಮಣಿದು ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರವಾಗಲಿ ಅಡಕೆಯನ್ನು ನಿಷೇಧಿಸುವ, ತಂಬಾಕಿನಂತೆ ಬೆಳೆ ನಿಯಂತ್ರಿಸುವ ಕೆಲಸಕ್ಕೆ ಇನ್ನೂ ಕೈ ಹಾಕಿಲ್ಲ. ನಿಷೇಧದ ಹೊರತಾಗಿಯೂ ಗುಟ್ಕಾ ಮತ್ತು ಅಡಕೆ ಬೇರೆ, ಬೇರೆ ಸ್ವರೂಪದಲ್ಲಿ ಮಾರಾಟವಾಗುತ್ತಿದೆ. ಅಡಕೆಯ ಧಾರಣೆಯ ಮೇಲೂ ಈ ಆದೇಶ ಪರಿಣಾಮ ಬೀರಿಲ್ಲ. ಇದು ಬೇರೆ ಮಾತು. ಆದರೆ ಅಡಕೆ ಆರೋಗ್ಯಕ್ಕೆ ಪೂರಕವೇ, ಹಾನಿಕಾರಕವೇ ಎಂಬ ವಾದ ಎಂದೋ ಇತ್ಯರ್ಥವಾಗಬೇಕಿತ್ತು.



90ರ ದಶಕದಿಂದಲೂ ನಾನಾ ಸಂಶೋಧನೆಗಳು ಅಡಕೆಯ ಮೇಲೆ ಮುಗಿ ಬಿದ್ದಿವೆ. ಈ ಸಂಶೋಧನಾ ವರದಿಗಳನ್ನು ಉಲ್ಲೇಖಿಸಿ 2004ರಲ್ಲಿ ಅಂದಿನ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಹಾಯಕ ಸಚಿವೆ ಪನಬಾಕ ಲಕ್ಷ್ಮಿ ಅಡಕೆ ಕ್ಯಾನ್ಸರ್‌ಕಾರಕ (ಕಾರ್ಸಿನೋಜೆನ್) ಎಂದು ಸಂಸತ್ತಿಗೆ ತಿಳಿಸಿದ್ದರು.

ಅಡಕೆಯಲ್ಲಿ ಸಹಜ ಸಾರಜನಕ ಅಂಶವಿದ್ದು ಇದರಿಂದ ಬಾಯಿ ಮತ್ತು ಗಂಟಲು ಕ್ಯಾನ್ಸರ್ ಬರುವ ಸಾಧ್ಯತೆ ಇದೆ ಎಂದು ಸಚಿವೆ ಸಂಶೋಧನಾ ವರದಿ ಸಾರಾಂಶವನ್ನು ಉಲ್ಲೇಖಿಸಿದ್ದರು. ಈ ಕಾರಣದಿಂದಲೇ ಸುಪ್ರೀಂಕೋರ್ಟ್ ಗುಟ್ಕಾದ ಮೇಲೆ ನಿಷೇಧ ಹೇರಿದಾಗ ಅಡಕೆಯನ್ನೂ ಪಾಲುದಾರನನ್ನಾಗಿ ಸೇರಿಸಲಾಗಿತ್ತು.

ಇದೀಗ ಕೇಂದ್ರಸರಕಾರದ ನಿರ್ದೇಶನದ ಮೇರೆಗೆ ನಡೆಯುತ್ತಿರುವ ಸಂಶೋಧನಾ ವರದಿ ಅಡಕೆ ಕ್ಯಾನ್ಸರ್‌ಕಾರಕ ಅಲ್ಲ ಎಂದು ವರದಿ ನೀಡಿದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇದನ್ನು ನಿರೂಪಿಸುವುದು ಸುಲಭದ ಕೆಲಸವಲ್ಲ. ಈ ನಿಟ್ಟಿನಲ್ಲಿ ಅಡಕೆ ಬೆಳೆಗಾರರ ಹೋರಾಟ ಸಾಕಷ್ಟು ಮುಂದೆ ಸಾಗಬೇಕಾಗಿದೆ. ಇತ್ತೀಚಿಗಿನ ವಿಶ್ವ ಆರೋಗ್ಯ ಸಂಸ್ಥೆಯ ವರದಿಯಲ್ಲಿ ಅಡಕೆ ಕ್ಯಾನ್ಸರ್‌ಕಾರಕ ಎಂದು ಮತ್ತೊಮ್ಮೆ ಉಲ್ಲೇಖಿಸಲಾಗಿದೆ.




ಡಬ್ಲ್ಯುಎಚ್‌ಒ ಅಂಗಸಂಸ್ಥೆ ಇಂಟರ್ ನ್ಯಾಷನಲ್ ಏಜೆನ್ಸಿ ಫಾರ್ ಲ್ಯಾನ್ಸೆಟ್ ಅಂಕಾಲಜಿ ಎಂಬ ಅಂತಾರಾಷ್ಟ್ರೀಯ ಜರ್ನಲ್‌ನಲ್ಲಿ ಪ್ರಕಟವಾಗಿದೆ. ಡಬ್ಲ್ಯುಎಚ್‌ಒ ಅಂಗಸಂಸ್ಥೆ ಐಎಆರ್‌ಸಿ ಸಂಸ್ಥೆ ಬಾಯಿ ಕ್ಯಾನ್ಸರ್ ಬಗ್ಗೆ ಸಂಶೋಧನೆ ನಡೆಸುತ್ತಿದ್ದು, ಪ್ರತಿ ಐದು ವರ್ಷಗಳಿಗೊಮ್ಮೆ ವಿಶ್ವ ಕ್ಯಾನ್ಸರ್ ವರದಿ ಪ್ರಕಟಿಸುತ್ತದೆ. ಕ್ಯಾನ್ಸರ್‌ಗೆ ಕಾರಣವಾಗುವ ಅಭ್ಯಾಸಗಳ ಬಗ್ಗೆ ಉಲ್ಲೇಖಿಸುತ್ತಾ ಅಡಕೆ ಸೇವನೆಯೂ ಒಂದು ಕಾರಣ ಎಂದು ತಿಳಿಸಲಾಗಿದೆ.

ಜಾಗತಿಕವಾಗಿ ಸುಮಾರು 60 ಕೋಟಿ ಮಂದಿ ಅಡಕೆ ಬಳಸುತ್ತಾರೆ. ದಕ್ಷಿಣ ಮಧ್ಯ ಏಷ್ಯಾ, ಆಗ್ನೇಯ ಏಷ್ಯಾ ಮತ್ತು ಏಷ್ಯಾದ ಇತರ ದೇಶಗಳಲ್ಲಿ ಅಡಕೆ ಬಳಕೆಯಲ್ಲಿದೆ. ಇದೇ ಮೊದಲ ಬಾರಿಗೆ ಐಎಆರ್‌ಸಿ ವರದಿಯಲ್ಲಿ ತಂಬಾಕು ಮಿಶ್ರಿತ ಅಡಕೆ ಮಾತ್ರವಲ್ಲ, ನೇರವಾಗಿ ಅಡಕೆ ಬೆಳೆಯನ್ನು ನಿಯಂತ್ರಿಸಬೇಕೆಂಬ ಪ್ರಸ್ತಾಪವೂ ಇದೆ. ತನ್ನ ಪಕ್ಷದ ಶಾಸಕರು, ಸಂಸದರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಪ್ರದೇಶಗಳ ಹಿತ ಕಾಯುವ ಉದ್ದೇಶದಿಂದ ಕೇಂದ್ರ ಸರಕಾರ ದೇಶದ ಅತಿ ಉನ್ನತ 16 ಸಂಶೋಧನಾ ಕೇಂದ್ರಗಳಲ್ಲಿ ಅಡಕೆ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಲು ಸೂಚನೆ ನೀಡಿದೆ.

ದೇಶದ ಯಾವುದೇ ಸಂಶೋಧನಾಲಯ ಈವರೆಗೆ ಅಡಕೆ ಕ್ಯಾನ್ಸರ್‌ಕಾರಕ ಎಂದು ವರದಿ ನೀಡಿಲ್ಲ. ಕರ್ನಾಟಕ ಮತ್ತು ಕೇರಳದ ಅಡಕೆ ಸಂಶೋಧನಾ ಕೇಂದ್ರಗಳು ನಡೆಸಿದ ಅಧ್ಯಯನ, ಅಡಕೆ ಆರೋಗ್ಯಕ್ಕೆ ಪೂರಕ ಎಂಬುದನ್ನು ಎತ್ತಿ ತೋರಿಸಿವೆ.

ಕಳೆದ 20 ವರ್ಷಗಳಲ್ಲಿ ಹಲವು ಸಂಶೋಧ ಕರು ಮತ್ತು ಅಧಿಕೃತ ಸಂಶೋಧನಾ ಸಂಸ್ಥೆಗಳ ಅಧ್ಯಯನದಲ್ಲಿ ಅಡಕೆ ಆರೋಗ್ಯಕ್ಕೆ ಹಾನಿಕಾರಕವಲ್ಲ, ಬದಲು ಆರೋಗ್ಯದಾಯಕ ಎಂದು ತಿಳಿಸಲಾಗಿದೆ. ಆದರೆ ಈ ಸಂಶೋಧನೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಬೀತುಮಾಡುವ ಕೆಲಸಗಳು ಇನ್ನೂ ಆಗಿಲ್ಲ. ಈ ಕಾರಣದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇವು ಮಾನ್ಯತೆ ಮತ್ತು ಪ್ರಚಾರ ಪಡೆಯುವಲ್ಲೂ ವಿಫಲವಾಗಿವೆ.

ಕೆಲವೊಂದು ಅಧ್ಯಯನಗಳು ಕ್ಲಿನಿಕಲ್ ಟ್ರಯಲ್ಸ್ ಮತ್ತು ಅದರ ಮಾನದಂಡದ ಅನ್ವಯ ನಡೆಯದ ಕಾರಣ ಇವುಗಳನ್ನು ತಜ್ಞರು ಸಂಶೋಧನೆಯ ಮಾನದಂಡದಡಿ ಅಂಗೀಕರಿಸಿಲ್ಲ. ಅಡಕೆಯಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿಲ್ಲದೇ ಹೋದರೆ ಇಡೀ ಜಗತ್ತಿಗೆ ಇದನ್ನು ಸಾರಿ ಹೇಳಬೇಕಿದೆ. ವಿಶ್ವಮಟ್ಟದಲ್ಲೂ ಭಾರತದ ವೀಳ್ಯಕ್ಕೆ ಅಂಗೀಕಾರ ದೊರಕಿಸಬೇಕಿದೆ.

ಇನ್ನುಳಿದಂತೆ ರಾಜ್ಯದಲ್ಲಿ ಇತ್ತೀಚೆಗೆ ಅಡಕೆ ಬೆಳೆಯುವ ಪ್ರದೇಶ ಹೆಚ್ಚಾಗಿದೆ. ಆದರೆ ಅಡಕೆ ಬೆಳೆ ಪ್ರಮಾಣ ಕಡಿಮೆಯಾಗಿದೆ. ಹಳದಿರೋಗದ ಕಾರಣ ಮಲೆನಾಡು, ಕರಾವಳಿ ಭಾಗದ ನೂರಾರು ರೈತರ ಅಡಕೆ ಸಂಪೂರ್ಣವಾಗಿ ನೆಲಕಚ್ಚಿವೆ. ಈ ರೋಗ ತೀವ್ರ ಪ್ರಮಾಣದಲ್ಲಿ ಹರಡುತ್ತಿದ್ದು ಇನ್ನು ಕೆಲವೇ ವರ್ಷಗಳಲ್ಲಿ ಅಡಕೆ ಗತಕಾಲದ ವೈಭವವಾಗಲಿದೆ ಎಂಬ ಆತಂಕವಿದೆ. ಹಳದಿ ರೋಗ ನಿಯಂತ್ರಣಕ್ಕೆ ಸೂಕ್ತ ಪರಿಹಾರೋಪಾಯ ಕಂಡು ಹಿಡಿಯಲು ರಾಜ್ಯ ಮತ್ತು ಕೇಂದ್ರ ಸರಕಾರಗಳು ತಕ್ಷಣ ಕಾರ್ಯಪ್ರವೃತ್ತವಾಗಬೇಕಿದೆ.

**- ಲೋಕೇಶ್** ಕಾಯರ್ಗ

# ಅಡಿಕೆ ಮರಕ್ಕೂ ಹಬ್ಬುತ್ತಿದೆ ಕೆಂಪು ಮೂತಿ ಹುಳ ಹಾವಳಿ

ಪ್ರತೀ ವರ್ಷ ಅಡಿಕೆ ಸಸಿ-ಮರದ ಸುಳಿ ಭಾಗವನ್ನು ಗಮನಿಸುತ್ತಾ ಇರಿ. ಕೆಲವು ವರ್ಷಗಳ ಹಿಂದೆ ತೆಂಗಿಗೆ ಮತ್ತು ತಾಳೆಗೆ ಮಾತ್ರವೇ ಬಾಧಿಸುತ್ತಿದ್ದ ಕೆಂಪು ಮೂತಿ ಹುಳ ಈಗ ಅಡಿಕೆಯ ಸುಳಿಗೂ ಬಾಧಿಸಲು ಪಾರಂಭವಾಗಿದೆ. ಅಡಿಕೆ ಮರದ ಸುಳಿ ಕೊಳೆಯುವಿಕೆ - ಮರ ಸಾಯುವಿಕೆಯಿಂದ ಭಾರೀ ಹಾನಿಯಾದ ಬೆನ್ನಲ್ಲೇ ಈ ಸಮಸ್ಯೆಯೂ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಕಡೆ ಕಂಡು ಬರಲಾರಂಭಿಸಿದೆ. ಬಾಡಿದಂತೆ ಕಂಡರೆ ಅಥವಾ ಕಾಂಡದಲ್ಲಿ ಸುಳಿಭಾಗದಿಂದ ಪ್ರಾರಂಭಗೊಂಡು ರಸ ಇಳಿದಂತೆ ಕಂಡರೆ, ಸುಳಿ ಭಾಗ ಸ್ವಲ್ಪ ಹರಿದಂತೆ ಕಂಡರೆ ಮರ ಏರಿ ಸುಳಿ ಭಾಗವನ್ನು ಒಮ್ಮೆ ಪರಿಶೀಲಿಸಿರಿ. ಸುಳಿಯಲ್ಲಿ ಏನೋ ಆಗಿದೆ ಎಂಬುದು ಈ ಮೇಲಿನ ಲಕ್ಷಣಗಳು ಹೇಳುತ್ತವೆ.

ಸಾಮಾನ್ಯವಾಗಿ ಕೆಂಪು ಮೂತಿ ಹುಳ 30 ಅಡಿಗಿಂತ ಎತ್ತರದ ಅಡಿಕೆ ಮರಗಳಿಗೆ ತೊಂದರೆ ಮಾಡಲಾರದು. ಕಾರಣ ಅಷ್ಟು ಎತ್ತರಕ್ಕೆ ಈ ದುಂಬಿಗೆ ಹಾರಲು ಕಷ್ಟ. ಸುಮಾರು 2 ವರ್ಷದ ನಂತರದ ಶಿರ ಮೂಡಿದ ಸಸಿಗಳಿಗೆ ಬಾಧಿಸುತ್ತದೆ. ಕೆಂಪು ಮೂತಿ ಹೆಣ್ಣು ದುಂಬಿ ಎಳೆ ಭಾಗವಾದ ಸುಳಿಯಲ್ಲಿ ಹೋಗಿ ಆ ಭಾಗವನ್ನು ಕೊರೆದು ತೂತು ಮಾಡಿ ಅಲ್ಲಿ ಮೊಟ್ಟೆ ಇಡುತ್ತದೆ. ಸಾಮಾನ್ಯವಾಗಿ ಒಂದೇ ದುಂಬಿ ಮೊಟ್ಟೆ ಇಡುವುದು. ಒಮ್ಮೆ ಮೊಟ್ಟೆ ಇಡುವಾಗ ಸುಮಾರು 300 ಮೊಟ್ಟೆಗಳನ್ನೂ ಇಡಬಹುದು. ಮೊಟ್ಟೆ ಸುಮಾರು ಬಿಳಿ ಜೋಳದ (ಅರಳು ಜೋಳ) ಕಾಳಿನಷ್ಟು ಇರುತ್ತದೆ. 4-5 ದಿನಗಳಲ್ಲಿ ಮೊಟ್ಟೆ ಮರಿಯಾಗುತ್ತದೆ. ಆ ಮರಿಗಳಿಗೆ ಮರದ ಎಳೆ ಭಾಗವೇ ಆಹಾರ. ಎಳೆ ಭಾಗವನ್ನು ತನ್ನ ಹರಿತವಾದ ಬಾಯಿಯಿಂದ ಕೊರೆಯುತ್ತಾ ಎಳೆ ಭಾಗದ ರಸ ಹೀರಿ ನಾರನ್ನು ಬಿಡುತ್ತದೆ. ಇದು ಸುಮಾರು 36-78 ದಿನಗಳ ತನಕ ಇರುತ್ತದೆ. ಆ ನಂತರ ತಾನೇ ವಿಸರ್ಜಿಸಿದ ನಾರಿನಲ್ಲೇ ಮತ್ತೆ ಪ್ಯೂಪೆ ಹಂತಕ್ಕೆ ಹೋಗಿ 10-15 ದಿನಗಳಲ್ಲಿ ದುಂಬಿಯಾಗುತ್ತದೆ.





ಈ ದುಂಬಿ ವಾತಾವರಣದಲ್ಲಿ ಎಲ್ಲಾ ಕಡೆ ಇರುತ್ತದೆ. ಇದಕ್ಕೆ ಕೊಳೆತ ವಸ್ತುಗಳು ಆಕರ್ಷಣೆ. ಬಾಳೆ ಹಣ್ಣು, ತೆಂಗಿನ ಮರದ ಎಳೆ ಗರಿ, ಕುರುವಾಯಿ ಕೀಟ ರಸ ಹೀರಿ ಹೊರ ಹಾಕಿದ ತ್ಯಾಜ್ಯ, ಮುಂತಾದ ಕೊಳೆತಿಸುಗಳು ಇರುವಲ್ಲಿ ಇದು ಹುಡುಕಿಕೊಂಡು ಬರುತ್ತದೆ. ತಾಳೆ ಜಾತಿಯ ಮರಗಳಾದ ತೆಂಗು, ಬೈನೆ (ಈಂದು) ತಾಳೆ, ಎಣ್ಣೆ ತಾಳೆ ಮರಗಳು ಸತ್ತು ಹೋಗಿದ್ದರೆ (ಸಿಡಿಲು ಇತ್ಯಾದಿಗಳಿಂದ) ಅದನ್ನು ತಕ್ಷಣ ವಿಲೇವಾರೀ ಮಾಡದೇ ಅಲ್ಲೇ ಉಳಿಸಿದ್ದರೆ ಅದರ ಕೊಳೆತ ವಾಸನೆಗೆ ಈ ದುಂಬಿಗಳು ಹುಡುಕಿಕೊಂಡು ಬರುತ್ತವೆ. ಅಡಿಕೆ ಮರಗಳ ಸುಳಿ ಭಾಗ ಕೊಳೆಯುವಂತಿದ್ದರೆ (ಸುಳಿಕೊಳೆ ರೋಗ) ಆ ಭಾಗದ ಕೊಳೆತ ವಾಸನೆಗೂ ದುಂಬಿ ಬರುತ್ತದೆ. ಹೀಗೆ ಬಂದ ಪ್ರೌಢ ದುಂಬಿ ಮೊಟ್ಟೆ ಇಟ್ಟು ಮರಿ ಮಾಡಲು ಈ ಅವಕಾಶವನ್ನು ಬಳಸಿಕೊಳ್ಳುತ್ತವೆ.



ನಿರ್ವಹಣೆ: ತೆಂಗಿನ ಮರಕ್ಕೆ ಬಾಧಿಸಿದಾಗ ಅದು ಸುಳಿ ಮೂಡುವ ಭಾಗದವರೆಗೆ ತಲುಪಿದ್ದರೆ ಮರ ಸಾಯುವುದೇ ಜಾಸ್ತಿ. ಪ್ರಾರಂಭದ ಹಂತದಲ್ಲಿ ಸುಳಿ ಬುಡಕ್ಕೆ ಬಾಧಿಸಿದ್ದನ್ನು ಗುರುತಿಸಿ ನಿರ್ವಹಣೆ ಮಾಡಿದರೆ ಬದುಕಿಸಲು ಸಾಧ್ಯ. ಅಡಿಕೆಯಲ್ಲಿ ಸುಳಿ ಭಾಗ ತೆಂಗಿನಂತೆ ಆದರೂ ಸಹ ಮೊಳಕೆ (ಬಡ್) ಮೂಲಕ್ಕೆ ತಲುಪಲು ಸೋಗೆಗಳ ಅವರಣ ಇರುತ್ತದೆ. ಆದ ಕಾರಣ ಸುಳಿಯ ಮೂಲಕವೇ ಕೆಳಕ್ಕೆ ಇಳಿಯಬೇಕು. ಆದಾಗ್ಯೂ ಗುರುತಿಸುವಿಕೆ ತಡವಾದರೆ ಮರ ಸಾಯುತ್ತದೆ. ಸುಳಿ ಭಾಗದ ಕೊಳೆತ ಎಲ್ಲಾ ಭಾಗಗಳನ್ನೂ ತೆಗೆದು ಸ್ವಚ್ಛ ಮಾಡಬೇಕು. ಅದನ್ನು ಸಂಗ್ರಹಿಸಿ ಸುಡಬೇಕು. ಇದರಲ್ಲಿ ಮರಿಹುಳು, ಮೊಟ್ಟೆಗಳು ಇರುತ್ತವೆ. ಆ ಭಾಗವನ್ನು ಪೂರ್ತಿ ಸ್ವಚ್ಛ ಮಾಡಿ ಅಲ್ಲಿಗೆ ಶಿಲೀಂದ್ರ ನಾಶಕ (ಬಾವಿಸ್ಟಿನ್ ಅಥವಾ ರಿಡೋಮಿಲ್) ಪೇಸ್ಟ್ ಹಚ್ಚಿ. ಜೊತೆಗೆ ಸೋಗೆಯ ಹಾಳೆ ಮರಕ್ಕೆ ತಾಗಿದ ಭಾಗದ ಎಡೆ ಮತ್ತು ಗಾಯ ಮಾಡಿ ತೆಗೆದ ಭಾಗಕ್ಕೆ ಕ್ಲೋರೋಫೆರಿಫೋಸ್ ಕೀಟನಾಶಕವನ್ನು ಸುರಿಯಿರಿ. ಒಂದು ಲೀಟರ್ ಪ್ಲಾಸ್ಟಿಕ್ ಬಾಟಲಿಯ ಮುಚ್ಚಲಕ್ಕೆ ತೂತು ಮಾಡಿ ಅದರಲ್ಲಿ 5 ಮಿಲೀ ಕ್ಲೋರೋಫೆರಿಫೋಸ್ ಕೀಟನಾಶಕ ಸೇರಿಸಿ ಅದಕ್ಕೆ 1 ಲೀ ನೀರು ಸೇರಿಸಿ ಮುಚ್ಚಳ ಮುಚ್ಚಿ ಒತ್ತಿದಾಗ ಎಲ್ಲಾ ಭಾಗಗಳಿಗೂ ಕೀಟನಾಶಕ ಬೀಳಿಸಬಹುದು. ಕೊನೆಗೆ ಬಾಟಲಿಯನ್ನು ಕವುಚಿ ಇಟ್ಟು ಬಿಂದು ಬಿಂದುವಾಗಿ ಕೀಟನಾಶಕ ಬೀಳುವಂತೆ ಇಟ್ಟು ಕಟ್ಟಿದರೆ ಸುಮಾರು 15-20 ದಿನಗಳಲ್ಲಿ ಹೊಸ ಸುಳಿ ಮೂಡುವ ಸಾಧ್ಯತೆ ಇದೆ.

ಕಳೆದೆರಡು ವರ್ಷಗಳಿಂದ ಅಡಿಕೆ ಮರಗಳಿಗೆ ಕೆಂಪು ಮೂತಿ ಹುಳ ಹೆಚ್ಚೆಚ್ಚು ಬರಲು ಪ್ರಾರಂಭವಾಗಿದೆ. ಗುರುತಿಸಿ ಉಪಚಾರ ಮಾಡದೆ ಹಾಗೇ ಬಿಟ್ಟರೆ, ಅದರ ಸಂಖ್ಯೆ ಹೆಚ್ಚಾಗಿ ಹೆಚ್ಚು ಹೆಚ್ಚು ಮರಗಳಿಗೆ ಬಾಧಿಸಿದರೂ ಅಚ್ಚರಿ ಇಲ್ಲ. ಆದ ಕಾರಣ ಜಾಗರೂಕರಾಗಿರಿ.

ಅತಿಯಾದ ಸಾರಜನಕ ಕೊಡುವುದರಿಂದ ಈ ಕೀಟ ಆ ಮರವನ್ನು ಅರಸಿ ಬರುತ್ತದೆ ಎಂಬುದನ್ನು ಗಮನಿಸಿರಿ. ಅಡಿಕೆ ಮರಗಳ ಬುಡಕ್ಕೆ ಥಿಮೇಟ್ ಹಾಕಿ ಕೆಲವರು ಬೇರು ಹುಳ. ಸುಳಿ ತಿಗಣೆ ನಿಯಂತ್ರಣ ಮಾಡುತ್ತಾರೆ. ಈ ವಿಧಾನದಲ್ಲಿ ಸುಮಾರು 40-50 ದಿನಗಳ ಕಾಲ ಕೆಂಪು ಮೂತಿ ಹುಳ ಇದ್ದರೂ ಸಾಯಬಹುದು. ಆದರೆ ಅಡಿಕೆ ಹಾಳೆ ಹಸಿ ಸೋಗೆಯನ್ನು ಹಸುಗಳಿಗೆ ಮೇವಾಗಿ ಬಳಸುವುದಿದ್ದರೆ ಥಿಮೇಟ್ ಅಂಶ ಸೋಗೆಯಲ್ಲಿ ಉಳಿದಿರುತ್ತದೆ ಎಂಬುದು ಗಮನದಲ್ಲಿ ಇರಲಿ.

**- ರಾಧಾಕೃಷ್ಣ** ಹೊಳ್ಳ

# ಕಲರ್ ಕಲರ್ ಮಣಿಕಟ್ಟು!

ನೀವು ನಮ್ಮ ಕರ್ನಾಟಕ ರಾಜ್ಯದಲ್ಲಿ ವಾಸಿಸುವ ಬುಡಕಟ್ಟು ಜನಾಂಗವಾದ ಹಾಲಕ್ಕಿ ಸಮಾಜದ ಮಹಿಳೆಯರು ತೊಡುವ ವಿಭಿನ್ನ ಶೈಲಿಯ ಉಡುಗೆ ಅದರ ಜೊತೆಗೆ ವರ್ಣರಂಜಿತ ಮಣಿಸರಗಳನ್ನು ಗಮನಿಸಿರಬಹುದು. ಅವರು ಧರಿಸುವ ಪ್ರತಿಯೊಂದು ವರ್ಣದ ಮಣಿಸರಕ್ಕೆ ಅದರದ್ದೇ ಆದ ಅರ್ಥಗಳಿವೆಯಂತೆ. ಹಾಗೆಯೇ ನಮ್ಮ ಲಂಬಾಣಿ, ಬಂಜಾರ ಸಮಾಜಗಳ ಮಹಿಳೆಯರೂ ಬೇರೆ ಬೇರೆ ಶೈಲಿಯ ಉಡುಗೆಗಳ ಜೊತೆಗೆ ಮಣಿಸರಗಳನ್ನು ಧರಿಸುತ್ತಾರೆ. ಇದು ಅವರ ಸೌಂದರ್ಯ ಹೆಚ್ಚಿಸುವುದರ ಜೊತೆಗೆ ಅವರ ಉಡುಗೆಯನ್ನು ಆಕರ್ಷಣೀಯವನ್ನಾಗಿಸುತ್ತದೆ.

ಇದೇ ರೀತಿಯ ಬಣ್ಣ ಬಣ್ಣ ಮಣಿಸರಗಳನ್ನು ದಕ್ಷಿಣ ಆಫ್ರಿಕಾದಲ್ಲಿ ವಾಸಿಸುವ ಅಲ್ಲಿಯ ಮೂಲ ನಿವಾಸಿಗಳು ಧರಿಸುತ್ತಾರೆ. ನಮಗೆ ಆಫ್ರಿಕಾ ಎಂದ ಕೂಡಲೇ ನೆನಪಾಗುವುದು ಅಲ್ಲಿಯ ಬುಡಕಟ್ಟು ಜನಾಂಗ, ಕಾಡು ಪ್ರಾಣಿಗಳು, ಬಡತನ ಮತ್ತು ಗಂಭೀರ ರೋಗಗಳು. ದಕ್ಷಿಣ ಆಫ್ರಿಕಾದಲ್ಲಿ ಯುರೋಪಿಯನ್ನರ ಆಕ್ರಮಣಕ್ಕೆ ಮೊದಲು ವಿಭಿನ್ನವಾದ ಸಂಸ್ಕೃತಿ ಇತ್ತು. ಅತ್ಯಂತ ದೊಡ್ಡದಾದ ಬುಡಕಟ್ಟು ಸಮಾಜ ವಾಸವಾಗಿತ್ತು. ಅವರ ದೈವ ದೇವರ ಉಪಾಸನೆ, ಆಹಾರ, ವಿಭಿನ್ನ ಉಡುಗೆ ತೊಡುಗೆಗಳು, ನೃತ್ಯಗಳು, ಸಂಗೀತ, ಹಾಡುಗಳು, ಜನರ ದೈನಂದಿನ ಜೀವನ ಎಲ್ಲವೂ ನಮ್ಮ ಅನಿಸಿಕೆಗಿಂತಲೂ ಭಿನ್ನವಾಗಿತ್ತು. ಬಡತನ ತಾಂಡವವಾಡುತ್ತಿದ್ದರೂ ಅವರ ಉಡುಗೆ ತೊಡುಗೆಗಳು ಮಾತ್ರ ಕಲರ್ ಫುಲ್ ಆಗಿತ್ತು.



ನಾವು ದಕ್ಷಿಣ ಆಫ್ರಿಕಾದ ಬಾವುಟವನ್ನೇ ಗಮನಿಸಿದರೆ ಅದರಲ್ಲಿ ಹಲವಾರು ವರ್ಣಗಳಿವೆ. ಅದೇ ರೀತಿ ಅಲ್ಲಿಯ ಮೂಲ ನಿವಾಸಿಗಳು ತಮ್ಮ ವಸ್ತ್ರ ವಿನ್ಯಾಸವನ್ನು ಮಾಡಿಕೊಂಡಿದ್ದರು. ಇದರಲ್ಲಿ ಪ್ರಮುಖವಾದುದು ಝುಲು ಅಥವಾ ಜುಲು ಮಣಿಕಟ್ಟುಗಳು. ನೀವು ಈ ಬಗೆಯ ಮಣಿಗಟ್ಟುಗಳನ್ನು ಆಫ್ರಿಕಾದ ಮೂಲ ನಿವಾಸಿಗಳ ಫೋಟೋಗಳಲ್ಲಿ ಖಂಡಿತವಾಗಿಯೂ ನೋಡಿರುತ್ತೀರಿ. ಇವುಗಳು ಸಣ್ಣ ಸಣ್ಣ ಮಣಿಗಳನ್ನು ಪೋಣಿಸಿ ಮಾಡಿದ ಸರಗಳು. ಒಂದು ಸಮಯದಲ್ಲಿ ಝುಲು ಮಣಿ ಸರಗಳು ಅಲ್ಲಿಯ ಜನರ ಟ್ರೆಂಡ್ ಆಗಿತ್ತು. ಆಫ್ರಿಕಾದ ಜನರಿಗೆ ಅದು ತಮ್ಮ ಗುರುತು, ಸಾಧನೆ ಮತ್ತು ಸಮುದಾಯವನ್ನು ತಿಳಿಸುವ ಸುಲಭ ಸಾಧನವಾಗಿತ್ತು. ಝುಲು ಮಣಿಗಟ್ಟಿನ ಪ್ರಮುಖ ಅಂಶವೆಂದರೆ ಅದರ ವರ್ಣರಂಜಿತ ವಿನ್ಯಾಸ.

ಕಾಲಕ್ಕೆ ತಕ್ಕ ಕೋಲ ಕಟ್ಟುವ ಹಾಗೆ ಈಗಿನ ಝುಲು ಮಹಿಳೆಯರು ಪ್ಲಾಸ್ಟಿಕ್‌ನಿಂದ ತಯಾರಿಸಿದ ವರ್ಣರಂಜಿತ ಮಣಿಗಳನ್ನು ತಮ್ಮ ಅಲಂಕಾರಕ್ಕೆ ಬಳಸಿಕೊಳ್ಳುತ್ತಾರೆ. ಮೊದಲು ಮೂಳೆ, ಪ್ರಾಣಿಗಳ ಕೊಂಬು, ಹೊಳೆಯುವ ಕಲ್ಲುಗಳು, ಚಿಪ್ಪುಗಳು, ಕೆಲವು ಬಗೆಯ ಬೀಜಗಳು, ಹೊಳೆಯುವ ಮರದ ತುಂಡು ಇತ್ಯಾದಿಗಳಿಂದ ಮಣಿಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಈ ಮಣಿಗಳನ್ನು ದಾರದಲ್ಲೋ, ಬಳ್ಳಿಯಲ್ಲೋ ಕಟ್ಟಿ ಅಲಂಕಾರಿಕವಾಗಿ ತಮ್ಮ ಕತ್ತಿನ ಸುತ್ತ ಹಾಕಿಕೊಳ್ಳುತ್ತಿದ್ದರು. ಈಗ ಮಣಿಗಳಿಂದಲೇ ಇಡೀ ಮೈಗೆ ಉಡುಗೆಯನ್ನು ಮಾಡಿ ಧರಿಸಿಕೊಳ್ಳುತ್ತಾರೆ. ಹದಿನೆಂಟನೇ ಶತಮಾನದ ಕೊನೆಯಲ್ಲಿ ವಸಾಹತುಶಾಹಿಗಳ ಆಗಮನದಿಂದಾಗಿ ಗಾಜು ಮತ್ತು ಸಿರಾಮಿಕ್ ವಸ್ತುಗಳಿಂದ ತಯಾರಿಸಿದ ಮಣಿಗಳನ್ನು ಧರಿಸಲು ಪ್ರಾರಂಭಿಸಿದರು. ಸಮಯ ಕಳೆದಂತೆ ದೇಶ ಸ್ವತಂತ್ರವಾದ ಬಳಿಕ ಝುಲು ಮಣಿಗಟ್ಟುಗಳನ್ನು ಶುಭ ಕಾರ್ಯಗಳಿಗೆ ಹೋಗುವಾಗ ಅಥವಾ ಇನ್ನಿತರ ಸಮಾರಂಭಗಳಲ್ಲಿ ಧರಿಸಲು ಪ್ರಾರಂಭಿಸಿದರು.



**- ಕೆ.ಪಿ.ಅಶ್ವಿನ್** ರಾವ್

# ಡಾ.ಕೆ.ಪಿ.ಮಾಥುರ್ ನೆನಪು

> ಡಾ.ಮಾಥುರ್ ಅವರು ದೆಹಲಿಯ ಪ್ರತಿಷ್ಠಿತ ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಹಿರಿಯ ಫಿಸಿಷಿಯನ್ ಹಾಗೂ ನಂತರದ ದಿನಗಳಲ್ಲಿ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿದ್ದರು. ಅವರ ಶ್ರೇಷ್ಠ ವೈದ್ಯಕೀಯ ಜ್ಞಾನ, ಕಟ್ಟುನಿಟ್ಟಿನ ವೃತ್ತಿಪರತೆ, ಕರ್ತವ್ಯನಿಷ್ಠೆ ಮತ್ತು ಮೃದು ಸ್ವಭಾವವನ್ನು ಗುರುತಿಸಿ ಅವರನ್ನು ಪ್ರಧಾನಿ ಇಂದಿರಾ ಗಾಂಧಿಯವರ ಅಧಿಕೃತ ವೈದ್ಯರನ್ನಾಗಿ ನೇಮಿಸಲಾಯಿತು.



ಡಾ. ಕೃಷ್ಣ ಪ್ರಸಾದ್ ಮಾಥುರ್ (ಡಾ.ಕೆ.ಪಿ.ಮಾಥುರ್) ಭಾರತದ ಪ್ರಥಮ ಮಹಿಳಾ ಪ್ರಧಾನಿ ಇಂದಿರಾ ಗಾಂಧಿಯವರ ವೈದ್ಯರಾಗಿ ಸುಮಾರು ಎರಡು ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಖ್ಯಾತ ವೈದ್ಯರು. 1966ರಲ್ಲಿ ಇಂದಿರಾ ಗಾಂಧಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ದಿನಗಳಿಂದ ಹಿಡಿದು 1984ರ ಅಕ್ಟೋಬರ್‌ನಲ್ಲಿ ಅವರು ಹತ್ಯೆಯಾಗುವವರೆಗೂ ಅವರ ಆರೋಗ್ಯ ರಕ್ಷಣೆಯ ಹೊಣೆಯನ್ನು ಡಾ.ಮಾಥುರ್ ನಿಷ್ಠೆಯಿಂದ ನಿಭಾಯಿಸಿದರು.

ಡಾ.ಮಾಥುರ್ ಕೇವಲ ವೈದ್ಯರಾಗಿ ಮಾತ್ರವಲ್ಲ, ಅಧಿಕಾರದ ಉತ್ತುಂಗದಲ್ಲಿದ್ದ ಪ್ರಭಾವಿ ನಾಯಕಿಯೊಬ್ಬರ ವೈಯಕ್ತಿಕ ಭಾವನೆಗಳು, ಕುಟುಂಬ ಜೀವನ, ಕಷ್ಟದ ದಿನಗಳು ಹಾಗೂ ರಾಜಕೀಯ ಏಳು-ಬೀಳುಗಳನ್ನು ಅತ್ಯಂತ ಹತ್ತಿರದಿಂದ ಕಂಡ ಅಪರೂಪದ ಪ್ರತ್ಯಕ್ಷದರ್ಶಿ ಕೂಡ.

ಡಾ.ಮಾಥುರ್ ಅವರು ದೆಹಲಿಯ ಪ್ರತಿಷ್ಠಿತ ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ಹಿರಿಯ ಫಿಸಿಷಿಯನ್ ಹಾಗೂ ನಂತರದ ದಿನಗಳಲ್ಲಿ ಮೆಡಿಕಲ್ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸಿದ್ದರು. ಅವರ ಶ್ರೇಷ್ಠ ವೈದ್ಯಕೀಯ ಜ್ಞಾನ, ಕಟ್ಟುನಿಟ್ಟಿನ ವೃತ್ತಿಪರತೆ, ಕರ್ತವ್ಯನಿಷ್ಠೆ ಮತ್ತು ಮೃದು ಸ್ವಭಾವವನ್ನು ಗುರುತಿಸಿ ಅವರನ್ನು ಪ್ರಧಾನಿ ಇಂದಿರಾ ಗಾಂಧಿಯವರ ಅಧಿಕೃತ ವೈದ್ಯರನ್ನಾಗಿ ನೇಮಿಸಲಾಯಿತು.

ಯಾವುದೇ ಸಾರ್ವಜನಿಕ ಪ್ರಚಾರದ ಹಂಬಲವಿಲ್ಲದೇ, ಗೌಪ್ಯತೆ ಮತ್ತು ವೈದ್ಯಕೀಯ ನೀತಿಶಾಸ್ತ್ರವನ್ನು ಚಾಚೂ ತಪ್ಪದೆ ಪಾಲಿಸಿದ ಅವರು, ಇಂದಿರಾ ಗಾಂಧಿ ಮತ್ತು ಗಾಂಧಿ-ನೆಹರು ಕುಟುಂಬದ ಅತ್ಯಂತ ನಂಬಿಕಸ್ಥ ಆಪ್ತರಲ್ಲಿ ಒಬ್ಬರಾಗಿ ಗುರುತಿಸಿಕೊಂಡರು. ಡಾ.ಮಾಥುರ್ ಅವರ ದಿನಚರಿ ಪ್ರತಿದಿನ ಬೆಳಗ್ಗೆ ನವದೆಹಲಿಯ ಸ-ರ್ ಜಂಗ್ ರಸ್ತೆಯ ಪ್ರಧಾನಿ ನಿವಾಸದಿಂದಲೇ ಆರಂಭವಾಗುತ್ತಿತ್ತು.

ನಿಗದಿತ ಸಮಯವಾದ ಬೆಳಗ್ಗೆ ಎಂಟೂವರೆಯಿಂದ ಒಂಬತ್ತು ಗಂಟೆಯೊಳಗೆ ಪ್ರಧಾನಿ ನಿವಾಸಕ್ಕೆ ತೆರಳಿ ಇಂದಿರಾ ನಾಡಿಮಿಡಿತ, ರಕ್ತದೊತ್ತಡ ಮತ್ತು ಸಾಮಾನ್ಯ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸುವುದು ಅವರ ನಿತ್ಯದ ಕಾಯಕವಾಗಿತ್ತು. ಈ ವೈದ್ಯಕೀಯ ತಪಾಸಣೆಯ ನಂತರ ಕೆಲ ನಿಮಿಷಗಳ ಕಾಲ ಕಾಫಿ ಅಥವಾ ಚಹಾದ ಜತೆ ಮುಕ್ತ ಸಂಭಾಷಣೆ ನಡೆಯುತ್ತಿತ್ತು. ಆ ಸಮಯದಲ್ಲಿ ಇಂದಿರಾ ಗಾಂಧಿಯವರು ದೇಶದ ಪ್ರಚಲಿತ ವಿದ್ಯಮಾನಗಳು, ದಿನಪತ್ರಿಕೆಯ ವರದಿಗಳು, ಹವಾಮಾನ ಹಾಗೂ ಸಾಮಾನ್ಯ ವಿಷಯಗಳ ಕುರಿತು ಹರಟುತ್ತಿದ್ದರು.

ಇಂದಿರಾ ಆರೋಗ್ಯ ರಹಸ್ಯ ಮತ್ತು ಶಿಸ್ತಿನ ಜೀವನಶೈಲಿಯನ್ನು ಡಾ.ಮಾಥುರ್ ಬಹುವಾಗಿ ಪ್ರಶಂಸಿಸುತ್ತಿದ್ದರು. ಅವರ ಪ್ರಕಾರ, ಇಂದಿರಾ ಗಾಂಧಿಯವರು ತಮ್ಮ ಆಹಾರ ಪದ್ಧತಿಯಲ್ಲಿ ಅತ್ಯಂತ ಕಟ್ಟುನಿಟ್ಟಾದ ಮಿತಾಹಾರಿಯಾಗಿದ್ದರು. ಎಣ್ಣೆ, ಅತಿಯಾದ ಮಸಾಲೆಗಳಿಂದ ದೂರವಿದ್ದು ಹಣ್ಣು-ತರಕಾರಿ ಹಾಗೂ ಸಾತ್ವಿಕ ಆಹಾರವನ್ನು ಸೇವಿಸುತ್ತಿದ್ದರು.

ಎಷ್ಟೇ ರಾಜಕೀಯ ಒತ್ತಡಗಳಿದ್ದರೂ ಪ್ರತಿದಿನ ನಿಯಮಿತ ಯೋಗ, ಪ್ರಾಣಾಯಾಮ ಮತ್ತು ಲಘು ನಡಿಗೆಯನ್ನು ತಪ್ಪಿಸುತ್ತಿರಲಿಲ್ಲ. ಎಂಥ ಬಿಕ್ಕಟ್ಟಿನ ಸಮಯದಲ್ಲೂ ಅವರು ತೋರುತ್ತಿದ್ದ ಮಾನಸಿಕ ಸ್ಥೈರ್ಯ ಮತ್ತು ಸಮಚಿತ್ತತೆಯ ಕಾರಣದಿಂದಾಗಿ ಅವರ ರಕ್ತದೊತ್ತಡ ಹಾಗೂ ಆರೋಗ್ಯ ನಿಯತಾಂಕಗಳು ಸದಾ ಸಹಜಮಟ್ಟದ ಇರುತ್ತಿದ್ದವು ಎಂದು ಮಾಥುರ್ ಉಲ್ಲೇಖಿಸಿದ್ದಾರೆ.

ಪ್ರಧಾನಿಯವರ ದೇಶ-ವಿದೇಶಗಳ ಪ್ರವಾಸಗಳಲ್ಲಿ ಮತ್ತು ಕಠಿಣ ಚುನಾವಣಾ ಪ್ರಚಾರಗಳಲ್ಲಿ ಡಾ.ಮಾಥುರ್ ಅವರ ನೆರಳಿನಂತೆ ಜತೆಗಿರುತ್ತಿದ್ದರು. ಸುಡುವ ಬಿಸಿಲಿನಲ್ಲಿ ದಿನಕ್ಕೆ ಹತ್ತಾರು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುವಾಗ, ನಿರ್ಜಲೀಕರಣವಾಗದಂತೆ ನೋಡಿ ಕೊಳ್ಳುವುದು, ವಿಶ್ರಾಂತಿಯ ಸಮಯವನ್ನು ನಿಗದಿಪಡಿಸುವುದು ಮತ್ತು ತುರ್ತು ಸಂದರ್ಭಗಳಲ್ಲಿ ತಕ್ಷಣ ಚಿಕಿತ್ಸೆ ನೀಡುವುದು ಅವರ ಕರ್ತವ್ಯವಾಗಿತ್ತು.

ಹಲವು ಬಾರಿ ಧೂಳು, ಹವಾಮಾನ ವೈಪರೀತ್ಯ ಮತ್ತು ಅತಿಯಾದ ಪ್ರಯಾಣದ ಆಯಾಸದ ನಡುವೆಯೂ ಪ್ರಧಾನಿಯವರು ಚೈತನ್ಯದಿಂದ ಕಾರ್ಯನಿರ್ವಹಿಸಲು ಡಾ. ಮಾಥುರ್ ಅವರ ನಿರಂತರ ವೈದ್ಯಕೀಯ ಮೇಲ್ವಿಚಾರಣೆ ಪ್ರಮುಖ ಪಾತ್ರ ವಹಿಸಿತ್ತು.

ಡಾ.ಮಾಥುರ್ ಅವರು ಇಂದಿರಾರ ಜೀವನದ ಅತ್ಯಂತ ಸಂಕಷ್ಟದ ರಾಜಕೀಯ ಮತ್ತು ವೈಯಕ್ತಿಕ ದಿನಗಳಿಗೆ ಮೂಕಸಾಕ್ಷಿಯಾಗಿದ್ದರು. 1975-77ರ ತುರ್ತುಪರಿಸ್ಥಿತಿ, ನಂತರದ ರಾಜಕೀಯ ಹಿನ್ನಡೆ ಹಾಗೂ 1977ರ ಚುನಾವಣಾ ಸೋಲಿನ ಸಂದರ್ಭದಲ್ಲೂ ಅವರು ಪ್ರಧಾನಿಯವರ ಆರೋಗ್ಯ ಸಲಹೆಗಾರರಾಗಿ ಮುಂದುವರಿದರು.

1980ರಲ್ಲಿ ಕಿರಿಯ ಪುತ್ರ ಸಂಜಯ್ ಗಾಂಧಿ ವಿಮಾನ ಅಪಘಾತದಲ್ಲಿ ಅಕಾಲಿಕ ನಿಧನ ಹೊಂದಿದಾಗ, ತೀವ್ರ ಆಘಾತಕ್ಕೆ ಒಳಗಾಗಿದ್ದ ಇಂದಿರಾರನ್ನು ಹತ್ತಿರದಿಂದ ಕಂಡಿದ್ದರು. ಒಬ್ಬ ತಾಯಿಯಾಗಿ ಅವರು ಅನುಭವಿಸಿದ ದುಃಖ ಮತ್ತು ಅದರಿಂದ ಹೊರಬಂದು ಮತ್ತೆ ದೇಶವನ್ನು ಮುನ್ನಡೆಸಿದ ಅದಮ್ಯ ಮನೋಬಲವನ್ನು ಮಾಥುರ್ ಕಣ್ಣಾರೆ ಕಂಡಿದ್ದರು.

**- ವಿಶ್ವೇಶ್ವರ** ಭಟ್

# ಶಿಕ್ಷಣದಿಂದ ಬದಲಾವಣೆ, ಸಮಾಜದಲ್ಲಿ ಗೌರವ

## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸಂಸದ ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಸಕಲೇಶಪುರ:** ಶಿಕ್ಷಣದ ಮೂಲಕ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದವರೂ ಸಾಧನೆ ಮಾಡಲು ಸಾಧ್ಯ ಎಂಬುದನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರು ತೋರಿಸಿಕೊಟ್ಟಿದ್ದಾರೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಶನಿವಾರ ಸಕಲೇಶಪುರ ತಾಲ್ಲೂಕು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ರಾಜ್ಯ ಸರ್ಕಾರಿ ನೌಕರರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಶಿಕ್ಷಣದಿಂದ ವ್ಯಕ್ತಿಯ ಜೀವನದಲ್ಲಿ ಬದಲಾವಣೆ ಹಾಗೂ ಸಮಾಜದಲ್ಲಿ ಗೌರವ ದೊರೆಯುತ್ತದೆ. ಡಾ. ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾಗಿ ದೇಶಕ್ಕೆ ಶ್ರೇಷ್ಠ ಸಂವಿಧಾನ ದೊರೆತಿದ್ದು, ಪ್ರತಿಯೊಬ್ಬರಿಗೂ ಸಮಾನ ಹಕ್ಕು ಹಾಗೂ ಅವಕಾಶಗಳು



ಲಭಿಸಿವೆ ಎಂದರು.

ಸಂವಿಧಾನವನ್ನು ಓದಿ ಅದರ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲಿಸುವ ನಿಜವಾದ ಗೌರವ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಸಮಾಜಕ್ಕೆ ಆಸ್ತಿಯಾಗಬೇಕು ಜೊತೆಗೆ ವಿದ್ಯಾರ್ಥಿಗಳು ಸಂವಿಧಾನದ ಆಶಯಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಇಂದು ತಮ್ಮನ್ನು ಒಳಗೊಂಡಂತೆ ಅನೇಕ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಪ್ರಮುಖ ಕಾರಣವಾಗಿದೆ. ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸುವ ಮೂಲಕ ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಹಕ್ಕು ದೊರಕಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಅಂಬೇಡ್ಕರ್ ಅವರು ಶಿಕ್ಷಣಕ್ಕೆ ನೀಡಿದ ಮಹತ್ವವನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಸರ್ಕಾರದ ಹಾಸ್ಟೆಲ್, ವಿದ್ಯಾರ್ಥಿವೇತನ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಬಳಸಿಕೊಂಡು ಉತ್ತಮವಾಗಿ ವ್ಯಾಸಂಗ ಮಾಡಿ ಐಎಎಸ್, ಕೆಎಎಸ್ ಸೇರಿದಂತೆ ಉನ್ನತ ಹುದ್ದೆಗಳನ್ನು ಅಲಂಕರಿಸುವ ಗುರಿ ಹೊಂದಬೇಕು ಎಂದು ಸಲಹೆ ನೀಡಿದರು.

ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಅವರು ಮಾತನಾಡಿ, ಸಮುದಾಯದ ಸರ್ಕಾರಿ ನೌಕರರು ಒಗ್ಗೂಡಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಸಂಘಟನೆಯ ಮೂಲಕ ಸಮಾಜದ ಯುವಜನರ ಸಾಧನೆಗೆ ಉತ್ತೇಜನ ನೀಡುವ ಇಂತಹ ಕಾರ್ಯಕ್ರಮಗಳು ಮಾದರಿಯಾಗಬೇಕು ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಶಿವಶಂಕರ್ ಅವರು ಮಾತನಾಡಿ, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹೂವು ಹಾಕುವುದಕ್ಕೆ ಮಾತ್ರ ಸೀಮಿತವಾಗದೆ ಅವರ ವಿಚಾರಧಾರೆ ಹಾಗೂ ಕೃತಿಗಳನ್ನು ಓದಿ ಅರ್ಥೈಸಿಕೊಳ್ಳಬೇಕು. ಕೇವಲ ಅಕ್ಷರಸ್ಥರಾಗುವುದಕ್ಕಿಂತ ವಿಚಾರವಂತರಾಗಿ, ಪ್ರಶ್ನಿಸುವ ಹಾಗೂ ವಿಮರ್ಶಾತ್ಮಕ ವಾಗಿ ಚಿಂತಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ನಿವೃತ್ತ ಸರ್ಕಾರಿ ನೌಕರರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಮೈಸೂರು ಅಕ್ಕ ಅಕಾಡೆಮಿಯ ಶಿವಕುಮಾರ್, ಡಿಎಫ್‌ಒ ಕ್ರಾಂತಿ, ವಾಣಿಜ್ಯ ಇಲಾಖೆ ಅಧಿಕಾರಿ ಕರುಣಾಕರ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಗಂಗಾಧರ್, ಹೆತ್ತೂರು ಅಣ್ಣಯ್ಯ, ಶಿವಮ್ಮ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಾಂತರಾಜ್, ಎಸ್‌ಸಿಎಸ್‌ಟಿ ಘಟಕದ ತಾಲ್ಲೂಕು ಅಧ್ಯಕ್ಷ ಮಹೇಶ್, ನಿರ್ದೇಶಕ ಪೃಥ್ವಿ ಪದಾಧಿಕಾರಿಗಳಾದ ಡಿ.ಪಿ.ರಮೇಶ್, ಕೆಂಚಯ್ಯ, ರವಿ, ನಿಂಗಯ್ಯ, ಕೀರ್ತಿ ಮತ್ತಿತರರು ಹಾಜರಿದ್ದರು.

# ಶೂನ್ಯ ಬಡ್ಡಿ ದರ ಕೃಷಿ ಸಾಲ ಮಿತಿ 5 ಲಕ್ಷ ರೂ.ಗೆ ಏರಿಕೆ

## ರಾಜ್ಯ ಸರ್ಕಾರದಿಂದ ಅಧಿಕೃತ ಸುತ್ತೋಲೆ

• ಪ್ರಜೋದಯ ವರದಿ

**ಬೆಂಗಳೂರು:** ಸಹಕಾರ ಸಂಘಗಳ ಮೂಲಕ ರೈತ ಸದಸ್ಯರಿಗೆ ನೀಡುವ ಶೂನ್ಯ ಬಡ್ಡಿ ದರದ ಸಾಲಮಿತಿಯನ್ನು 5 ಲಕ್ಷ ರೂ.ಗಳಿಗೆ ಏರಿಸಲಾಗಿದ್ದು, ಈ ಸಂಬಂಧ ಸರ್ಕಾರದಿಂದ ಅಧಿಕೃತ ಸುತ್ತೋಲೆ ಹೊರಡಿಸಲಾಗಿದೆ.

ರೈತರಿಗೆ ಸಹಕಾರಿ ಸಂಘಗಳ ಮೂಲಕ ನೀಡುವ ಶೂನ್ಯ ಬಡ್ಡಿ ದರದ ಬೆಳೆ ಸಾಲ ಮಿತಿಯನ್ನು 2023-24ನೇ ಸಾಲಿನಲ್ಲಿ ಸರ್ಕಾರ 3ರಿಂದ 5 ಲಕ್ಷ ರೂ.ಗಳಿಗೆ ಏರಿಕೆ ಮಾಡಲಾಗಿತ್ತು. ಆದರೆ ನಬಾರ್ಡ್ ಇದಕ್ಕೆ ಬೇಕಾದ ಮೊತ್ತವನ್ನು ಬಿಡುಗಡೆಗೊಳಿಸದ ಕಾರಣ ಅನೇಕ ರೈತರು ಈ ಯೋಜನೆಯಿಂದ ವಂಚಿತರಾಗಿದ್ದರು.

ಈಗ ಸಾಲ ಮಿತಿ ಏರಿಕೆ ಕುರಿತು ಸಹಕಾರ ಇಲಾಖೆಯಿಂದ ಸುತ್ತೋಲೆ ಪ್ರಕಟವಾಗಿದ್ದು, 2026-27ನೇ ಸಾಲಿನಲ್ಲಿ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ನೀಡುವ 5 ಲಕ್ಷ ರೂ. ವರೆಗಿನ ಕೃಷಿ ಸಾಲ ಮತ್ತು 2 ಲಕ್ಷ ರೂ.ವರೆಗಿನ ಪಶು ಸಂಗೋಪನೆ ಮತ್ತು ಮೀನುಗಾರಿಕೆ ದುಡಿಯುವ ಬಂಡವಾಳ ಸಾಲ ಹಾಗೂ ಶೇ.3 ಬಡ್ಡಿ ದರದಲ್ಲಿ ನೀಡುವ 15 ಲಕ್ಷ ರೂ. ಮಧ್ಯಮಾವಧಿ ಸಾಲ ವಿತರಿಸುವಂತೆ ಸೂಚಿಸಲಾಗಿದೆ. ಇದುವರೆಗೆ ಶೇ.3 ಬಡ್ಡಿ ದರದ ಸಾಲದ ಮಿತಿ ಗರಿಷ್ಠ 10 ಲಕ್ಷ ರೂ. ಆಗಿತ್ತು. ಕನಿಷ್ಠ ಶೇ.10ರಷ್ಟು ಹೊಸ ಸದಸ್ಯರಿಗೆ, ಶೇ.24.10ರಷ್ಟು ಪ.ಜಾತಿ, ಪಂಗಡದ ಸದಸ್ಯರಿಗೆ ಸಾಲ ವಿತರಿಸಲು ನಿರ್ದೇಶನ ನೀಡಲಾಗಿದೆ.



### ಸದುಪಯೋಗಪಡಿಸಿಕೊಳ್ಳಿ: ಸಿ.ಎಂ.



ಪ್ರಿಯ ರೈತರೇ, ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ 5 ಲಕ್ಷ ರೂ.ವರೆಗೆ ಪಡೆದ ಬೆಳೆ ಸಾಲವನ್ನು ಗರಿಷ್ಠ ಒಂದು ವರ್ಷದೊಳಗೆ ಬಡ್ಡಿರಹಿತವಾಗಿ ಮರುಪಾವತಿಸಿದಲ್ಲಿ ಸರಕಾರದಿಂದ ಪ್ರತಿವರ್ಷ ಬಡ್ಡಿ ಸಹಾಯಧನ ಪಾವತಿಸಲಾಗುತ್ತದೆ. ಮಂಜೂರಾದ ಸಾಲದ ಹಣ ಡಿಸಿಸಿ ಬ್ಯಾಂಕ್‌ನಲ್ಲಿರುವ ಉಳಿತಾಯ ಖಾತೆಗೆ ಜಮಾ ಆಗಿರುವುದನ್ನು ಖಚಿತಪಡಿಸಿಕೊಂಡು ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕೋರಿಕೊಳ್ಳುತ್ತೇನೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಸಂದೇಶ ನೀಡಿದ್ದಾರೆ.

# ಅಂಬೇಡ್ಕರ್ ಪ್ರತಿಮೆ ಅನಾವರಣ: ಆ.25 ರಂದು ಅರೆಬೆತ್ತಲೆ ಚಳುವಳಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಾರತ ರತ್ನ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಅನಾವರಣಕ್ಕೆ ವಿಳಂಬ ಮಾಡುತ್ತಿರುವ ತಾಲ್ಲೂಕು ಆಡಳಿತದ ಕಾರ್ಯ ವೈಖರಿಯನ್ನು ಖಂಡಿಸಿ, ಆ.25ರಂದು ಅರೆಬೆತ್ತಲೆ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಮುಖಂಡ ನಂಜುಂಡ ಮೈಮ್ ಅವರು ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಸ್ಥಾಪಿಸಿ ಈಗಾಗಲೇ ಹತ್ತು ತಿಂಗಳು ಕಳೆದಿದೆ. ಆದರೂ ಇದುವರೆಗೂ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿಲ್ಲ ಎಂದು ಆರೋಪಿಸಿದರು.

ಪ್ರತಿಮೆ ಲೋಕಾರ್ಪಣೆಗೆ ಕ್ರಮ ಕೈಗೊಳ್ಳುವಂತೆ ಪ್ರತಿಮೆ ಎದುರು ಪ್ರತಿಭಟನೆ ನಡೆಸಿ, ತಾಲ್ಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದರೂ, ಆಡಳಿತ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಇದು ನಾಚಿಕೆಗೇಡಿನ ಸಂಗತಿ ಎಂದು ನಂಜುಂಡ ಮೈಮ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಮೆ ತಂದು ನಿಲ್ಲಿಸಿ ಹತ್ತು ತಿಂಗಳು ಕಳೆದರೂ ಇನ್ನೂ ಅನಾವರಣ ಮಾಡಲು ಹಿಂದೇಟು ಹಾಕುತ್ತಿರುವುದು ಏಕೆ ಎಂದು ಅವರು ಪ್ರಶ್ನಿಸಿದರಲ್ಲದೆ, ಸರ್ಕಾರದ ಶಿಷ್ಟಾಚಾರದ ಪ್ರಕಾರ ಆದಷ್ಟು ಬೇಗ ಪ್ರತಿಮೆ ಲೋಕಾರ್ಪಣೆಗೆ ಕ್ರಮ ಕೈಗೊಳ್ಳಬೇಕು. ವಿಳಂಬ ಮಾಡುವುದಾದರೆ, ನಮಗೆ ಅವಕಾಶ ನೀಡಿದಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿ ಪ್ರತಿಮೆ ಅನಾವರಣ ಮಾಡಲಾಗುವುದು ಎಂದು ಹೇಳಿದರು.

ಆಗಸ್ಟ್ 25ರಂದು ನಡೆಯಲಿರುವ ಪ್ರತಿಭಟನೆಯಲ್ಲಿ ತಾಲೂಕಿನ ದಲಿತ ಸಂಘಟನೆಗಳು ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಲಿವೆ ಎಂದ ಅವರು, ಪಟ್ಟಣದ ಕೆ.ಆರ್. ವೃತ್ತದಿಂದ ತಾಲ್ಲೂಕು ಕಚೇರಿ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಯ ವರೆಗೆ ಅರೆಬೆತ್ತಲೆ ಮೆರವಣಿಗೆ ನಡೆಸಲಾಗುವುದು. ನಂತರ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ನಂಜುಂಡ ಮೈಮ್ ಅವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಪರಮ ಗಂಗಾಧರ್, ಪ್ರಶಾಂತ್, ಗನ್ನಿ ವಿಶ್ವನಾಥ್, ಮಣಿಕಂಠ ಹಾಗೂ ಸಿ.ಜಿ. ಕುಮಾರ್ ಉಪಸ್ಥಿತರಿದ್ದರು.

# ಮುಖ್ಯಮಂತ್ರಿಗಳ ಭೇಟಿ ಅಭಿವೃದ್ಧಿ ಕೆಲಸಕ್ಕೋ, ರಿಯಲ್ ಎಸ್ಟೇಟ್‌ಗೋ..?

## ಶಾಸಕ ಹೆಚ್.ಕೆ.ಸುರೇಶ್‌ಗೆ ಮಾಜಿ ಸಚಿವ ಬಿ.ಶಿವರಾಂ ಪ್ರಶ್ನೆ

• ಪ್ರಜೋದಯ ವರದಿ

**ಬೇಲೂರು:** ಕ್ಷೇತ್ರದ ಅಭಿವೃದ್ಧಿ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬಳಿ ಶಾಸಕರು ತೆರಳಿ ಅನುದಾನ ಹಾಗೂ ಅಭಿವೃದ್ಧಿ ಯೋಜನೆಗಳನ್ನು ತರಬೇಕೆ ಹೊರತು, ಬೇರೆ ಉದ್ದೇಶಗಳಿಗೆ ಭೇಟಿ ನೀಡುತ್ತಿದ್ದಾರೆಯೇ ಎಂಬುದನ್ನು ಜನರಿಗೆ ಸ್ಪಷ್ಟಪಡಿಸಬೇಕು ಎಂದು ಮಾಜಿ ಸಚಿವ ಬಿ.ಶಿವರಾಂ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಜನರಿಗೆ ಮೂಲಭೂತವಾಗಿ ಬೇಕಾಗಿರುವುದು ಕುಡಿಯುವ ನೀರು, ನೀರಾವರಿ, ರಸ್ತೆ ಸೇರಿದಂತೆ ಅಗತ್ಯ ಮೂಲಸೌಕರ್ಯ. ಇಂತಹ ಪ್ರಮುಖ ಸಮಸ್ಯೆಗಳು ಇರುವಾಗ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು. ಹಲವು ವರ್ಷಗಳಿಂದ ಪ್ರಸ್ತಾವನೆಯಲ್ಲಿರುವ ಹೆಬ್ಬಾಳ ಏತ ನೀರಾವರಿ ಯೋಜನೆಗೆ ಅನುದಾನ ಮತ್ತು ಅನುಮೋದನೆ ದೊರಕಿಸಿಕೊಡಲು ಶಾಸಕ ಹೆಚ್.ಕೆ.ಸುರೇಶ್ ಅವರು ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ತರಬೇಕು ಎಂದರು.

8 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 61 ಕೆರೆಗಳಿಗೆ ನೀರು ತುಂಬಿಸುವ ಹೆಬ್ಬಾಳ



ಏತ ನೀರಾವರಿ ಯೋಜನೆ ಜನರ ಬಹುದಿನಗಳ ಬೇಡಿಕೆಯಾಗಿದೆ. ಇಂತಹ ಮಹತ್ವದ ಯೋಜನೆಯನ್ನು ಜಾರಿಗೆ ತರಲು ಸರ್ಕಾರದ ಮಟ್ಟದಲ್ಲಿ ಒತ್ತಡ ಹಾಕುವುದು ಶಾಸಕರ ಜವಾಬ್ದಾರಿ. ಅದನ್ನು ಬಿಟ್ಟು ಬೇರೆ ವಿಚಾರಗಳಿಗೆ ಆದ್ಯತೆ ನೀಡಿದರೆ ಜನರು ಪ್ರಶ್ನಿಸುವುದು ಸಹಜ ಎಂದು ಹೇಳಿದರು.

ಬೇಲೂರು ಕ್ಷೇತ್ರದಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದು, ರೈತರು ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಜೋಳ ಸೇರಿದಂತೆ ಹಲವು ಬೆಳೆಗಳು ಒಣಗುತ್ತಿವೆ. ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಹಲವು ವರ್ಷಗಳಿಂದ ಪ್ರಸ್ತಾವನೆಯಲ್ಲಿರುವ ಹೆಬ್ಬಾಳ ಏತ ನೀರಾವರಿ ಯೋಜನೆಗೆ ಸರ್ಕಾರ ಅಗತ್ಯ ಅನುದಾನ ಹಾಗೂ ಅನುಮತಿಗಳನ್ನು ಒದಗಿಸಿ ಕಾಮಗಾರಿ ಆರಂಭಿಸಬೇಕು ಎಂದು ಒತ್ತಾಯಿಸಿದರು.

**ನಾನೇ ಮಾಡಿ ತೋರಿಸುತ್ತೇನೆ**

ಶಾಸಕರಿಗೆ ಇನ್ನೂ ಸುಮಾರು ಒಂದೂವರೆ ವರ್ಷಗಳ ಅವಧಿ ಇದೆ. ಈ ಅವಧಿಯೊಳಗೆ ಹೆಬ್ಬಾಳ ಏತ ನೀರಾವರಿ ಯೋಜನೆಯನ್ನು ಜಾರಿಗೆ ತಂದು ತೋರಿಸಲಿ. ಅದರ ಶ್ರೇಯಸ್ಸು ಶಾಸಕರಿಗೆ ಸಲ್ಲಲಿ. ಆದರೆ ಸಾಧ್ಯವಾಗದಿದ್ದರೆ ನಾನು ಜನರ ಪರವಾಗಿ ಹೋರಾಟ ನಡೆಸಿ ಈ ಯೋಜನೆಯನ್ನು ಮಾಡಿ ತೋರಿಸುತ್ತೇನೆ. ಇದನ್ನು ನಾನು ಸವಾಲಾಗಿ ಸ್ವೀಕರಿಸಲು ಸಿದ್ಧನಿದ್ದೇನೆ ಎಂದು ಬಿ.ಶಿವರಾಂ ಅವರು ಹೇಳಿದರು.

ಜನರಿಗೆ ಕಣ್ಣೊರೆಸುವ ಕೆಲಸ ಬೇಡ. ಹೆಬ್ಬಾಳ ಭಾಗದಲ್ಲಿ ಕಾರ್ಯಕ್ರಮಗಳಿಗೆ ಹೋಗಿ ಗುದ್ದಲಿಪೂಜೆ ಮಾಡಿ ಅಭಿವೃದ್ಧಿ ಮಾಡುತ್ತೇನೆ ಎಂದು ಹೇಳುವುದರಿಂದ ಮಾತ್ರ ಜನರ ಸಮಸ್ಯೆ ಬಗೆಹರಿಯುವುದಿಲ್ಲ. ಜನರಿಗೆ ಬೇಕಾಗಿರುವುದು ಶಾಶ್ವತ ನೀರಿನ ಸೌಲಭ್ಯ. ಕೇವಲ ಆಶ್ವಾಸನೆ ನೀಡುವುದಲ್ಲ, ಯೋಜನೆ ಅನುಷ್ಠಾನವಾಗಬೇಕು ಎಂದು ಅವರು ತಿಳಿಸಿದರು.

**ಸೋತರೂ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ**

ನಾನು ಚುನಾವಣೆಯಲ್ಲಿ ಸೋತಿದ್ದರೂ ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದೇನೆ. ಜನರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವುದು ನನ್ನ ಜವಾಬ್ದಾರಿ. ನಾವು ಶಾಸಕರ ವಿರುದ್ಧ ಆರೋಪ ಮಾಡದೆ, ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಶ್ನೆ ಮಾಡಿದರೂ, ಶಿವರಾಂ ಅವರು ನಾನು ಮಾಡುವ ಕೆಲಸಗಳಿಗೆ ಅಡ್ಡಗಾಲು ಹಾಕುತ್ತಿದ್ದಾರೆ ಎಂದು ನನ್ನ ಮೇಲೆ ಆರೋಪ ಮಾಡುತ್ತಾರೆ ಎಂದು ಹೇಳಿದರು.

ಕಿಸಾನ್ ಘಟಕದ ತಾಲ್ಲೂಕು ಅಧ್ಯಕ್ಷ ಕುಮಾರ್, ಬಿಕ್ಕೋಡು ಹೋಬಳಿ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ, ನಾಗೇಶ್, ರಘು ಅವರು ಹಾಜರಿದ್ದರು.

# ಅಹಿತಕರ ಘಟನೆಗಳಿಗೆ ಗೋವಿಂದ ಕಾರಣ: ಶಂಕೆ

**ಬೆಂಗಳೂರು:** ಹನೂರಿನಲ್ಲಿ ನಡೆದ ಶೂಟೌಟ್ ಘಟನೆ ನಂತರದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಮರಿ ವೀರಪ್ಪನ್ ಎಂಬಾತ ಗ್ರಾಮಸ್ಥರಿಗೆ ಪ್ರಚೋದನೆ ನೀಡಿರುವ ಅಂಶ ಬಯಲಾಗಿದೆ.



ಈ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು ಅಂದಿನ ಘಟನೆಯನ್ನು ಖಂಡಿಸಿ ಪ್ರತಿಭಟನೆ, ಅರಣ್ಯ ಕಚೇರಿ ಧ್ವಂಸ, ನಂತರ ಅರಣ್ಯಕ್ಕೆ ಬೆಂಕಿ ಹಚ್ಚಿದ ಬಗ್ಗೆ ಪೊಲೀಸರು ತನಿಖೆ ಕೈಗೊಂಡಾಗ ಈ ಎಲ್ಲಾ ಘಟನೆಗಳ ಹಿಂದೆ ಪ್ರಚೋದನೆ ನೀಡಿರುವುದು ಗೊತ್ತಾಗಿದೆ.

ಈ ಎಲ್ಲಾ ಕೃತ್ಯಗಳ ಹಿಂದೆ ಮರಿ ವೀರಪ್ಪನ್ ಖ್ಯಾತಿಯ ಗಂಗನ ದೊಡ್ಡಿಯ ಗೋವಿಂದನ ಕೈವಾಡ ಇರುವುದು ಗೊತ್ತಾಗಿದೆ. ಈತ ಹನೂರು ತಾಲ್ಲೂಕಿನ ಪಚ್ಚೆದೊಡ್ಡಿ ಅರಣ್ಯ ಪ್ರದೇಶದಲ್ಲಿ ದೈತ್ಯಾಕಾರದ ಹುಲಿ ಕೊಂದು ಮೂರು ತುಂಡುಗಳನ್ನಾಗಿ ಮಾಡಿ ಅಮಾನವೀಯತೆ ಮರೆದಿದ್ದ. ಈ ಪ್ರಕರಣದಲ್ಲಿ ಜೈಲು ಪಾಲಾಗಿ ಜಾಮೀನು ಪಡೆದು ಹೊರ ಬಂದಿದ್ದಾನೆ.

ಕಾವೇರಿ ವನ್ಯಜೀವಿ ಧಾಮದ ಶಾಗ್ಯ ಕಾಡಿನಲ್ಲಿ ಅರಣ್ಯ ಇಲಾಖೆ ಹಾಗೂ ಕಳ್ಳ ಬೇಟೆಗಾರರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಸಾವನ್ನಪ್ಪಿದ ಬಳಿಕ ನಡೆದ ಗಲಭೆ, ಪ್ರತಿಭಟನೆ ಸೇರಿ ಇನ್ನಿತರ ಘಟನೆಗಳಿಗೆ ಈತ ಪ್ರಚೋದನೆ ನೀಡಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಈ ನಡುವೆ ಕಳ್ಳಬೇಟೆ ತಡೆ ಶಿಬಿರ ಹಾಗು ವಸತಿ ಗೃಹಗಳ ಮೇಲೆ ದಾಳಿ, ಅರಣ್ಯಕ್ಕೆ ಬೆಂಕಿ ಇಟ್ಟವರು ಯಾರು ಎಂಬ ಬಗ್ಗೆಯೂ ಅರಣ್ಯ ಸಿಬ್ಬಂದಿಯಲ್ಲಿ ಭಯದ ವಾತಾವರಣ ಉಂಟಾಗಿದ್ದು, ಪರಿಸರವಾದಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ಘಟನೆಯನ್ನು ಮುಂದಿಟ್ಟುಕೊಂಡು ಸರ್ಕಾರಿ ಆಸ್ತಿ ನಷ್ಟ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವೂ ಕೇಳಿ ಬಂದಿದೆ. ಪ್ರಕರಣ ಸಂಬಂಧ ರಾಜ್ಯ ಸರ್ಕಾರ ತನಿಖೆಗಾಗಿ ಮ್ಯಾಜಿಸ್ಟ್ರೇಟ್ ನೇತೃತ್ವದ ತಂಡವನ್ನು ರಚಿಸಿದೆ.

# ಕಂಚಿಗೆ ಮುತ್ತಿಕ್ಕಿದ ತ್ರಿಶಾ- ಗಾಯತ್ರಿ ಜೋಡಿ

• ಪ್ರಜೋದಯ ವರದಿ

**ದೆಹಲಿ:** ಇಲ್ಲಿ ನಡೆದ 2026ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಕಂಚಿನ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದಾರೆ.

ಸೆಮಿಫೈನಲ್‌ನಲ್ಲಿ ವಿಶ್ವದ ನಂ.1 ಚೀನೀ ಜೋಡಿಗೆ ಸೋತರೂ, ಅವರು ಭಾರತದ ಮಹಿಳಾ ಡಬಲ್ಸ್ ತಂಡಕ್ಕೆ 15 ವರ್ಷಗಳ ನಂತರ ವಿಶ್ವ ಚಾಂಪಿಯನ್‌ಶಿಪ್ ಪದಕವನ್ನು ತಂದರು. ಇದು ಭಾರತೀಯ ಬ್ಯಾಡ್ಮಿಂಟನ್‌ಗೆ ಅತ್ಯಂತ ಮಹತ್ವದ ಕ್ಷಣವಾಗಿದೆ.

ಇಂದಿರಾ ಗಾಂಧಿ ಅರೆನಾದಲ್ಲಿ ನಡೆದ 2026 ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಚೀನಾದ ವಿಶ್ವದ ನಂ.1 ಶ್ರೇಯಾಂಕಿತ ಜೋಡಿ ಲಿಯು ಶೆಂಗ್ ಶು ಮತ್ತು ಟ್ಯಾನ್ ನಿಂಗ್ ವಿರುದ್ಧ ಸೋಲನುಭವಿಸಿದ ಭಾರತದ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಕಂಚಿನ ಪದಕವನ್ನು ತನ್ನದಾಗಿಸಿಕೊಂಡಿದೆ.



ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಚೀನಾದ ಜೋಡಿಗೆ ಪ್ರಬಲ ಪೈಪೋಟಿ ನೀಡಿ 21-18 ರಿಂದ ಮೊದಲ ಗೇಮ್ ಗೆದ್ದಿತು. ಆದರೆ ಅಗ್ರ ಶ್ರೇಯಾಂಕಿತ ಚೀನೀ ಜೋಡಿ ಮುಂದಿನ ಎರಡು ಗೇಮ್‌ಗಳನ್ನು 21-13 ಮತ್ತು 21-8 ರಿಂದ ಗೆದ್ದುಕೊಳ್ಳುವ ಮೂಲಕ ಫೈನಲ್ ಸುತ್ತಿಗೆ ಅರ್ಹತೆ ಪಡೆದುಕೊಂಡಿತು.

ಈ ಸೋಲಿನ ಹೊರತಾಗಿಯೂ, ತ್ರಿಶಾ ಮತ್ತು ಗಾಯತ್ರಿ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಮಹಿಳಾ ಡಬಲ್ಸ್ ಪದಕಕ್ಕಾಗಿನ 15 ವರ್ಷಗಳ ಕಾಯುವಿಕೆಯನ್ನು ಕೊನೆಗೊಳಿಸಿದರು.

ಇದಕ್ಕೂ ಮೊದಲು, ಜ್ವಾಲಾ ಗುಟ್ಟಾ ಮತ್ತು ಅಶ್ವಿನಿ ಪೊನ್ನಪ್ಪ 2011 ರಲ್ಲಿ ಭಾರತಕ್ಕೆ ಕಂಚಿನ ಪದಕ ಗೆದ್ದುಕೊಟ್ಟಿದ್ದರು. ಇದೀಗ ತ್ರಿಶಾ ಮತ್ತು ಗಾಯತ್ರಿ ಕಂಚಿನ ಪದಕ ಗೆಲ್ಲುವ ಮೂಲಕ ಪದಕದ ಬರವನ್ನು ನೀಗಿಸಿದ್ದಾರೆ.

2026 ರ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಈ ಜೋಡಿ 64 ರ ಸುತ್ತಿನಲ್ಲಿ ಸ್ಪೇನ್‌ನ ಪೌಲಾ ಲೋಪೆಜ್ ಮತ್ತು ಲೂಸಿಯಾ ರೊಡ್ರಿಗಸ್ ವಿರುದ್ಧ 21-9, 21-13 ಅಂತರದಲ್ಲಿ ಭರ್ಜರಿ ಜಯ ಸಾಧಿಸುವ ಮೂಲಕ ತಮ್ಮ ಅಭಿಯಾನವನ್ನು ಪ್ರಾರಂಭಿಸಿತು. ನಂತರ 32 ರ ಸುತ್ತಿನಲ್ಲಿ 16 ನೇ ಶ್ರೇಯಾಂಕದ ಲಾರೆನ್ ಲ್ಯಾಮ್ ಮತ್ತು ಅಮೆರಿಕದ ಅಲಿಸನ್ ಲೀ ಅವರನ್ನು 21-15, 21-12 ಅಂತರದಲ್ಲಿ ಮಣಿಸಿತು.

ನಂತರ ನಡೆದ 16 ರ ಸುತ್ತಿನಲ್ಲಿ ಏಳನೇ ಶ್ರೇಯಾಂಕದ ಜಪಾನ್‌ನ ರಿನ್ ಇವಾನಾಗಾ ಮತ್ತು ಕೀ ನಕಾನಿಶಿ ಅವರನ್ನು 21-16, 21-12 ಅಂತರದಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ತಲುಪಿತು. ನಂತರ ಕ್ವಾರ್ಟರ್ ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಚೀನಾದ ಜಿಯಾಯಿ ಫ್ಯಾನ್ ಮತ್ತು ಜಾಂಗ್ ಶುಕ್ಸಿಯಾನ್ ಅವರನ್ನು 16-21, 21-15, 21-13 ಅಂತರದ ಅದ್ಭುತ ಗೆಲುವಿನೊಂದಿಗೆ ಸೆಮಿಫೈನಲ್‌ಗೆ ಅರ್ಹತೆ ಪಡೆದುಕೊಂಡಿತ್ತು.

# ಆಹಾರ ಸುರಕ್ಷತೆಗೆ ರಾಜ್ಯಾದ್ಯಂತ ವಾಚ್ ಟೀಂ

• ಪ್ರಜೋದಯ ವರದಿ

**ಮಂಗಳೂರು:** ಆಹಾರ ಸುರಕ್ಷತೆ ಮತ್ತು ನಕಲಿ ಔಷಧಗಳ ಬಗ್ಗೆ ನಿರಂತರ ನಿಗಾ ವಹಿಸುವ ನಿಟ್ಟಿನಲ್ಲಿ ವಾಚ್ ಟೀಂ ಅನ್ನು ಪ್ರತಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ರಚಿಸಲು ಯೋಚಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಅಸುರಕ್ಷಿತ ಆಹಾರ ಮತ್ತು ನಕಲಿ ಔಷಧಗಳ ಬಗ್ಗೆ ದೂರು ಸಲ್ಲಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ಯೂ ಆರ್ ಕೋಡ್ ರಚಿಸಲಾಗಿದೆ. ಅದನ್ನು ಪ್ರತಿ ಹೋಟೆಲ್, ಔಷಧ ಮಳಿಗೆಗಳ ಎದುರು ಹಾಕಲು ಸೂಚಿಸಲಾಗುವುದು. ಕ್ಯೂಆರ್ ಕೋಡ್ ರಚಿಸಿದ ಎರಡು ದಿನಗಳಲ್ಲೇ 400ಕ್ಕೂ ಅಧಿಕ ದೂರುಗಳು ಬಂದಿವೆ. ದೂರು ಬಂದ ಸ್ಥಳಕ್ಕೆ ಆಹಾರ ಸುರಕ್ಷತಾ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆಂದು ಹೇಳಿದರು.

ಹಾಲಿ ಇರುವ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಈ ಕಾರ್ಯ ಮಾಡಬಹುದು. ಆದರೆ, ಇದು ವ್ಯಾಪಕ



ವಾಗಿ ನಡೆಯಬೇಕು ಮತ್ತು ಈ ಎಚ್ಚರ ಜನರಲ್ಲಿ ನಿರಂತರವಾಗಿ ಉಳಿಯಬೇಕು. ಅದಕ್ಕಾಗಿ ಸಾಮಾಜಿಕ ಕೆಲಸದಲ್ಲಿ ಆಸಕ್ತಿ ಇರುವ ನಿವೃತ್ತ ಅಧಿಕಾರಿಗಳು, ನಿವೃತ್ತ ಪ್ರಾಧ್ಯಾಪಕರು, ತಜ್ಞರು, ಹಿರಿಯರನ್ನು ಒಳಗೊಂಡ ವಾಚ್ ಟೀಂ ರಚಿಸಿ, ಅವರಿಗೆ ನಿರ್ದಿಷ್ಟ ಅಧಿಕಾರ ನೀಡಲು ಯೋಚಿಸಲಾಗಿದೆ. ಕಾನೂನು ವ್ಯಾಪ್ತಿ ಪರಿಶೀಲಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆಂದು ತಿಳಿಸಿದರು.

ನಕಲಿ ಔಷಧ ಜಾಲವು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿಲ್ಲ, ಹೊರ ರಾಜ್ಯಗಳಲ್ಲಿ ನಕಲಿ ಔಷಧ ಸಿದ್ಧವಾಗಿ ನಮ್ಮ ರಾಜ್ಯಕ್ಕೆ ಬರುವ ಸಾಧ್ಯತೆ ಇರುತ್ತದೆ. ಅದರ ಸಮಗ್ರ ಪರಿಶೀಲನೆಗೆ ಎಸ್‌ಐಟಿ ರಚಿಸಲಾಗಿದೆ ಎಂದು, ಬಿಡದಿ ಬಳಿ ಪತ್ತೆಯಾದ ನಕಲಿ ಔಷಧ ತಯಾರಿಕಾ ದಂಧೆಯನ್ನು ಉಲ್ಲೇಖಿಸಿ ಹೇಳಿದರು.

# ಮತದಾರರ ಪಟ್ಟಿ ನಾಳೆ ಸಭೆ ಆಯೋಜನೆ



• ಪ್ರಜೋದಯ ವರದಿ

**ಸಕಲೇಶಪುರ:** ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆ- 2026ರ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು ಆ.24ರಂದು ಬೆಳಿಗ್ಗೆ 10.30ಕ್ಕೆ ಸಭೆ ಆಯೋಜಿಸಲಾಗಿದೆ.

199ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಅಧ್ಯಕ್ಷರೊಂದಿಗೆ ಸಕಲೇಶಪುರ ಉಪವಿಭಾಗಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಭೆ ನಡೆಯಲಿದೆ. ಮತದಾರರ ನೋಂದಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಸಂಬಂಧಪಟ್ಟವರು ತಪ್ಪದೇ ಹಾಜರಾಗುವಂತೆ ತಹಸೀಲ್ದಾರ್ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಕೋರಿದ್ದಾರೆ.

ಮತದಾರರ ಪಟ್ಟಿಗಳ ವಿಶೇಷ ಪರಿಷ್ಕರಣೆ2026ಕ್ಕೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗದ ಸೂಚನೆಯಂತೆ ಕರಡು ಮತದಾರರ ಪಟ್ಟಿ ಪ್ರಕಟಿಸುವ ಕುರಿತು ಸಭೆಯಲ್ಲಿ ಮಾಹಿತಿ ನೀಡಲಾಗುವುದು.

# ಸಾಕು ನಾಯಿ ಬಲಿ ಪಡೆದ ಚಿರತೆ



• ಪ್ರಜೋದಯ ವರದಿ

**ಹೆತ್ತೂರು:** ಹೋಬಳಿಯ ಹೊಂಗಡಹಳ್ಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಯನೂರು ಗ್ರಾಮದಲ್ಲಿ ಚಿರತೆಯೊಂದು ಸಾಕು ನಾಯಿಯನ್ನು ತಿಂದಿರುವ ಘಟನೆ ಶನಿವಾರ ಮುಂಜಾನೆ ನಡೆದಿದೆ.

ಗ್ರಾಮದ ಸಂದೀಪ್ ಎಂಬುವರು ಮನೆಯ ಅಂಗಳದಲ್ಲಿ ಶುಕ್ರವಾರ ತಡರಾತ್ರಿ ಮನೆ ಮುಂಭಾಗದಲ್ಲಿ ಸರಪಳ್ಳಿ ಇಂದ ಕಟ್ಟಿದರು, ಮರುದಿನ ಬೆಳಿಗ್ಗೆ ನೋಡಿದಾಗ ಚಿರತೆ ದಾಳಿಯಿಂದ ಸಾಕು ನಾಯಿಯ ದೇಹ ಅರ್ಧ ಇದ್ದಿದನ್ನು ಗಮನಿಸಿ ಅರಣ್ಯ ಇಲಾಖೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಬಂದು ಪರಿಶೀಲನೆ ನಡೆಸಿದ್ದಾರೆ.

ಒಂದು ವಾರದ ಹಿಂದೆ ಗ್ರಾಮದಲ್ಲಿ ಹಸು ಮೇಲೆ ದಾಳಿ ನೆಡೆಸಿ ತಿಂದಿರುವ ಘಟನೆ ನಡೆದಿದ್ದು, ಚಿರತ ದಾಳಿ ಹಿನ್ನೆಲೆಯಲ್ಲಿ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಚಿರತೆ ಸೆರೆಹಿಡಿಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

ರಾತ್ರಿ ವೇಳೆ ಒಂಟಿಯಾಗಿ ಮನೆಯಿಂದ ಹೊರಗೆ ಹೋಗದಂತೆ ಹಾಗೂ ಸಾಕುಪ್ರಾಣಿಗಳನ್ನು ಸುರಕ್ಷಿತವಾಗಿ ಮನೆಯೊಳಗೆ ಇರಿಸುವಂತೆ ನಿವಾಸಿಗಳಿಗೆ ಸೂಚಿಸಲಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಪ್ರದೇಶದ ಮೇಲೆ ನಿಗಾ ವಹಿಸುತ್ತಿದ್ದಾರೆ.

ಈ ಭಾಗದಲ್ಲಿ ಚಿರತೆ ಸಂಚಾರ ಇದೆ ಎಂಬ ಸುದ್ದಿಗಳ ನಡುವೆಯೇ ರಾತ್ರಿ ವೇಳೆ ನಡೆದ ಈ ಘಟನೆ ಸ್ಥಳೀಯರಲ್ಲಿ ಇನ್ನಷ್ಟು ಆತಂಕ ಮೂಡಿಸಿದೆ. ಇದೇ ವೇಳೆ ಈ ಪರಿಸರದಲ್ಲಿ ಮತ್ತಷ್ಟು ಚಿರತೆಗಳ ಸಂಚಾರವಿದೆ ಎಂಬ ಅನುಮಾನವೂ ಕಾಡುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣವೇ ಸೂಕ್ತ ಕ್ರಮ ಕೈಗೊಂಡು, ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಸ್ಕೌಟ್ಸ್-ಗೈಡ್ಸ್‌ನಿಂದ ಶಿಸ್ತು, ಸೇವಾ ಮನೋಭಾವ, ನಾಯಕತ್ವ ಗುಣ ಸಾಧ್ಯ

# ವಿದ್ಯಾರ್ಥಿಗಳು ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು

• ಪ್ರಜೋದಯ ವರದಿ

**ಅರಕಲಗೂಡು:** ವಿದ್ಯಾರ್ಥಿಗಳು ಪಠ್ಯ ಶಿಕ್ಷಣದ ಜೊತೆಗೆ ದೇಶಭಕ್ತಿ ಹಾಗೂ ಜಾನಪದ ಗೀತೆಗಳಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಬೇಕು. ಇಂತಹ ಚಟುವಟಿಕೆಗಳು ಜ್ಞಾನ ವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೂ ನೆರವಾಗುತ್ತವೆ ಎಂದು ಮೈಸೂರು ವಿಭಾಗದ ಸಹಾಯಕ ರಾಜ್ಯ ಆಯುಕ್ತ ಬಿ.ಕೆ.ಬಸವರಾಜು ಹೇಳಿದರು.

ತಾಲ್ಲೂಕು ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಗೊರೂರಿನ ಎ.ಎನ್.ವಿ. ಕಾಲೇಜಿನಲ್ಲಿ ಆಯೋಜಿಸಿದ್ದ 2026-27ನೇ ಸಾಲಿನ ದೇಶಭಕ್ತಿ ಹಾಗೂ ಜಾನಪದ ಗೀತೆ ಗಾಯನ ಸ್ಪರ್ಧೆ ಮತ್ತು ಒಂದು ದಿನದ ತಾಲೂಕು ಪುನಶ್ಚೇತನ ಹಾಗೂ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಚಟುವಟಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ. ಶಿಸ್ತು, ಸೇವಾ ಮನೋ ಭಾವ, ನಾಯಕತ್ವ ಗುಣ



ಹಾಗೂ ದೇಶಪ್ರೇಮ ಬೆಳೆಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದು ತಿಳಿಸಿದರು.

ಶ್ರೀ ಯೋಗಾ ನರಸಿಂಹಸ್ವಾಮಿ ವಿದ್ಯಾಸಂಸ್ಥೆಯ ಅಧ್ಯಕ್ಷೆ ಗೀತಾಂಜಲಿ ಮೂರ್ತಿ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳಲು ಅಗತ್ಯವಿರುವ ಎಲ್ಲ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಕಲಿಯಬೇಕು. ಕನ್ನಡ ಭಾಷೆ ಹಾಗೂ ನಾಡಿನ ಸಂಸ್ಕೃತಿಯ ಬಗ್ಗೆ ಭಾಷಾಭಿಮಾನ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ ಎಂದು ಅವರು ಕಿವಿಮಾತು ಹೇಳಿದರಲ್ಲದೆ, ವಿದ್ಯಾರ್ಥಿಗಳು ಕೆಟ್ಟ ಚಟಗಳಿಂದ ದೂರವಿರಬೇಕು ಎಂದು ಸಲಹೆ ನೀಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ. ನಾರಾಯಣ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳನ್ನು ಬಿತ್ತುವುದರೊಂದಿಗೆ ಸಮಾಜ ಸೇವೆಯ ಮನೋಭಾವ ಹಾಗೂ ಶಿಸ್ತನ್ನು ಮೈಗೂಡಿಸಿ ಕೊಳ್ಳುವಂತೆ ಮಾಡುವ ಉದ್ದೇಶ ದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಎಂ.ಜಿ.ರಾಮನಾಥ್, ಖಜಾಂಚಿ ಎಚ್.ಎನ್.ಶೇಷಾದ್ರಿ, ನಿರ್ದೇಶಕರಾದ ಜಿ.ಜಿ.ಭೋಜರಾಜು, ಹೇಮರಾಜು, ಜಯರಮೇಶ್, ಪ್ರಿಯಾಂಕ, ಸೋಮಶೇಖರ್, ಸುಲ್ತಾನ ಬಾನು, ನಯಾಜ್ ಪಾಷಾ, ಸ್ಕೌಟ್ಸ್ ಮತ್ತು ಗೈಡ್ಸ್ ಪದಾಧಿಕಾರಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದೇಶಭಕ್ತಿ ಹಾಗೂ ಜಾನಪದ ಗೀತೆ ಗಾಯನ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

# ಆ.27ರಂದು ಪೀಕಾರ್ಡ್ ವಾರ್ಷಿಕ ಮಹಾಸಭೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಪೀಕಾರ್ಡ್ ಬ್ಯಾಂಕಿನ 2025-26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ 27ರ ಗುರುವಾರದಂದು ಬೆಳಗ್ಗೆ 11 ಘಂಟೆಗೆ ಆಯೋಜಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಬಿ.ಎನ್.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಷಿಕ ಮಹಾಸಭೆಯನ್ನು ಬ್ಯಾಂಕ್‌ನ ಮುಂಭಾಗದ ಆವರಣದಲ್ಲಿ ಆಯೋಜಿಸಲಾಗಿದೆ. ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಕ್ಷೇತ್ರದ ಶಾಸಕ ಸಿ.ಎನ್. ಬಾಲಕೃಷ್ಣ, ವಿಧಾನಪರಿಷತ್ತು ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮತ್ತು ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಅವರು ಭಾಗವಹಿಸಲಿದ್ದಾರೆ.

ಬ್ಯಾಂಕಿನ ಎಲ್ಲ ಷೇರುದಾರ ಸದಸ್ಯರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಮಾಜಿ ಅಧ್ಯಕ್ಷರು, ಮಾಜಿ ನಿರ್ದೇಶಕರು ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಅವರು ತಿಳಿಸಿದ್ದಾರೆ.

CMYK CMYK CMYK CMYK

# ಎಲ್ಲಾ ಕ್ಷೇತ್ರಗಳ ಸುಧಾರಣೆ ನಮ್ಮ ಬದ್ಧತೆ: ಮೋದಿ

## ಭಾರತ ಭರವಸೆಯ ಉಜ್ವಲ ತಾಣ | ನಿರುದ್ಯೋಗ ನಿವಾರಣೆ ಆದ್ಯತೆ

• ಪ್ರಜೋದಯ ವರದಿ

**ನವದೆಹಲಿ:** ಎಲ್ಲಾ ಕ್ಷೇತ್ರಗಳಲ್ಲಿನ ಸುಧಾರಣೆಗಳು ತಮ್ಮ ಸರ್ಕಾರದ ಬದ್ಧತೆಯಾಗಿದ್ದು, ದೇಶದ ನಿರಂತರ ಬೆಳವಣಿಗೆಯ ವೇಗವನ್ನು ಕಾಯ್ದುಕೊಳ್ಳಲು ಭಾರತ ಹಲವು ಕ್ರಮಗಳನ್ನು ಮುಂದುವರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಎಕನಾಮಿಕ್ ಟೈಮ್ಸ್ ವರ್ಲ್ಡ್ ಲೀಡರ್ಸ್ ಫೋರಂ ಉದ್ದೇಶಿಸಿ ಮಾತನಾಡಿದ ಅವರು, ಭಾರತ ತನ್ನ ನೀತಿಗಳಲ್ಲಿ ರಾಜಕೀಯ ಸ್ಥಿರತೆ ಮತ್ತು ನಿರಂತರತೆ ಹೊಂದಿದೆ. ಹೀಗಾಗಿ ಜಗತ್ತು ಭಾರತವನ್ನು ಬೆಳವಣಿಗೆ ಮತ್ತು ಭರವಸೆಯ ಉಜ್ವಲ ತಾಣವಾಗಿ ನೋಡುತ್ತಿದೆ ಎಂದರು.

ನಿರಂತರ ಬೆಳವಣಿಗೆಯ ವೇಗವನ್ನು ಖಚಿತಪಡಿಸಿಕೊಳ್ಳಲು ಭಾರತ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಗಳೊಂದಿಗೆ ದೇಶ ಮುನ್ನಡೆಯುತ್ತಿದ್ದು, ಸುಧಾರಣೆಗಳು ನಮ್ಮ ಬದ್ಧತೆಯಾಗಿವೆ ಎಂದು ಹೇಳಿದರು.

ಸಂಪನ್ಮೂಲಗಳ ಶಸ್ತ್ರೀಕರಣದಿಂದಾಗಿ ಜಗತ್ತು ಬೆಳವಣಿಗೆಗೆ ಸಂಬಂಧಿಸಿದ ಹಲವು ಕಳವಳಗಳನ್ನು ಎದುರಿಸುತ್ತಿದೆ. ಆದರೆ ಭಾರತವನ್ನು ಮಾತ್ರ ಬೆಳವಣಿಗೆಯ ಉಜ್ವಲ ತಾಣವಾಗಿ ನೋಡಲಾಗುತ್ತಿದೆ ಎಂದು ಪ್ರಧಾನಿ ಹೇಳಿದರು.

ಆಡಳಿತದ ಮೇಲೆ ಬಲವಾದ ಗಮನ ಕೇಂದ್ರೀಕರಿಸಿರುವ ಸುಧಾರಣೆಗಳಿಗೆ ಎನ್‌ಡಿಎ ಸರ್ಕಾರ ಸ್ಪಷ್ಟ ಮಾರ್ಗಸೂಚಿ ಹೊಂದಿದೆ. ಹೆಚ್ಚಿನ ಉತ್ಪಾದನೆಗೆ ಉತ್ತೇಜನ ನೀಡುವ ಮೂಲಕ ಸರ್ಕಾರ ಪ್ರತಿಫಲ ನೀಡುತ್ತಿದೆ ಎಂದರು.



ಜನರನ್ನು ಕೊರತೆಯಲ್ಲಿಡುವುದು ಹಿಂದಿನ ಸರ್ಕಾರಗಳ ನೀತಿಯಾಗಿತ್ತು. ಅದರಿಂದ ಜನರು ತಮ್ಮ ಮೂಲಭೂತ ಅಗತ್ಯಗಳಿಗಾಗಿ ಸರ್ಕಾರದ ಮುಂದೆ ಬೇಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಿಂದಿನ ಸರ್ಕಾರಗಳ ಲೈಸೆನ್ಸ್ ರಾಜ್ ನಿರುದ್ಯೋಗದ ಹೊರೆಯನ್ನು ಹೆಚ್ಚಿಸಿತ್ತು. ಆದರೆ ತಮ್ಮ ಸರ್ಕಾರದ ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಮಾದರಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದರು.

ನಾವು ಕೇವಲ ನಿಯಮಗಳನ್ನು ಬದಲಾಯಿಸುತ್ತಿಲ್ಲ. ಸಂಪೂರ್ಣ ನಿಯಂತ್ರಣ ವ್ಯವಸ್ಥೆಯನ್ನೇ ಬದಲಾಯಿಸುತ್ತಿದ್ದೇವೆ. ಕಾನೂನಿನ ಅಡಿಯಲ್ಲಿ ಸ್ಪಷ್ಟವಾಗಿ ನಿಷೇಧಿಸದ ಕೆಲಸವನ್ನು ಮಾಡಲು ಅನಗತ್ಯ ನಿಯಂತ್ರಣ ಇರಬಾರದು ಎಂಬುದು ನಮ್ಮ ಸರ್ಕಾರದ ನಂಬಿಕೆ ಎಂದು ಪ್ರಧಾನಿ ಹೇಳಿದರು.

### ಸ್ಟಾರ್ ಲಿಂಕ್ ಉಪಗ್ರಹ ಸೇವೆ ಪ್ರಯೋಜನಕಾರಿ

ಭಾರತದ ಗ್ರಾಮೀಣ ಹಾಗು ದೂರದ ಪ್ರದೇಶಗಳಲ್ಲಿ ನೆಟ್‌ವರ್ಕ್ ಮತ್ತು ಇಂಟರ್ನೆಟ್ ಸಂಪರ್ಕವಿಲ್ಲದ ಸಮುದಾಯಗಳಿಗೆ ಸ್ಟಾರ್ ಲಿಂಕ್ ಉಪಗ್ರಹ ಅಂತರ್ಜಾಲ ಸೇವೆಯು ಅತ್ಯಂತ ಪ್ರಯೋಜನಕಾರಿಯಾಗಲಿದೆ ಎಂದು ಟೆಕ್ ಶತಕೋಟ್ಯಾಧಿಪತಿ ಎಲೋನ್ ಮಸ್ಕ್ ಅವರು ಹೇಳಿದ್ದಾರೆ.
ನಿಯಂತ್ರಕ ಅಡೆತಡೆಗಳು ಮತ್ತು ಭದ್ರತಾ ಅನುಮೋದನೆಗಳ ವಿಳಂಬದ ನಡುವೆಯೂ ಮಸ್ಕ್ ಭಾರತದ ಮಾರುಕಟ್ಟೆಯ ಮೇಲಿನ ತಮ್ಮ ವಿಶ್ವಾಸವನ್ನು ಮುಂದುವರಿಸಿದ್ದಾರೆ.
ನಗರ ಪ್ರದೇಶಗಳಿಗೆ ಹೋಲಿಸಿದರೆ ಭಾರತದ ಹಳ್ಳಿಗಳಲ್ಲಿ ಇಂಟರ್ನೆಟ್ ಚಂದಾದಾರಿಕೆ ಸಾಂದ್ರತೆ ತೀರಾ ಕಡಿಮೆ ಇದೆ. ನಗರ ಪ್ರದೇಶದಲ್ಲಿ 100 ಜನರಿಗೆ 126.83 ಚಂದಾದಾರರಿದ್ದರೆ, ಗ್ರಾಮೀಣ ಭಾಗದಲ್ಲಿ 100 ಜನರಿಗೆ 48.31 ಚಂದಾದಾರರು ಮಾತ್ರ ಇದ್ದಾರೆ. ಈ ಅಂತರವನ್ನು ಕಡಿಮೆ ಮಾಡಲು ಸ್ಟಾರ್‌ಲಿಂಕ್ ಸಹಾಯ ಮಾಡಲಿದೆ ಎಂದು ಮಸ್ಕ್ ಎಕ್ಸ್ ವೇದಿಕೆಯಲ್ಲಿ ತಿಳಿಸಿದ್ದಾರೆ.

ತಮ್ಮ ಸರ್ಕಾರ ನೀತಿ ಮಟ್ಟದಲ್ಲಿ ಮುಂದಿನ ಪೀಳಿಗೆಯ ಸುಧಾರಣೆಗಳನ್ನು ಜಾರಿಗೊಳಿಸುತ್ತಿದ್ದು, ಆಡಳಿತದ ಮಟ್ಟದಲ್ಲಿಯೂ ಹಾಗು ಜೀವನ ಸುಲಭಗೊಳಿಸುವ ನಿಟ್ಟಿನಲ್ಲಿಯೂ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ. ನಿಷೇಧಿಸದ ಹೊರತು ಅನುಮತಿ ಎಂಬ ಮಾದರಿಯಿಂದ ನಿಷೇಧಿಸಿದ ಹೊರತು ಅನುಮತಿ ಎಂಬ ಮಾದರಿಯತ್ತ ಸಾಗುತ್ತಿದ್ದೇವೆಂದು ಹೇಳಿದರು.

ಭಾರತೀಯ ರೈಲ್ವೆ, ದೆಹಲಿ ಮೆಟ್ರೋ ಮತ್ತು ನಮೋ ರ್‍ಯಾಪಿಡ್ ರೈಲಿನಂತಹ ಕ್ಷೇತ್ರಗಳಲ್ಲಿನ ಸಣ್ಣ ಸುಧಾರಣೆಗಳೂ ದೇಶವು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ ಎಂಬುದನ್ನು ತೋರಿಸುತ್ತವೆ ಎಂದು ಪ್ರಧಾನಿ ಹೇಳಿದರು.

ವಿದೇಶಿ ಉಪಗ್ರಹಗಳು ಭಾರತದ ನಕ್ಷೆಯನ್ನು ರಚಿಸಬಹುದಾದರೂ, ಅನುಮತಿಯಿಲ್ಲದೆ ಯಾರೂ ಭಾರತದ ನಕ್ಷೆಯನ್ನು ತಯಾರಿಸಲು ಸಾಧ್ಯವಿಲ್ಲ ಎಂಬಂತಹ ನಿಯಮಗಳು ಈ ಹಿಂದೆ ಇದ್ದವು. ಆದರೆ ತಮ್ಮ ಸರ್ಕಾರ ಈ ವ್ಯವಸ್ಥೆಯಲ್ಲಿ ಬದಲಾವಣೆ ತಂದಿದೆಯೆಂದು ಅವರು ಹೇಳಿದರು.

ಗಡಿ ಮೂಲಸೌಕರ್ಯವು ಭಾರತದ ಶಕ್ತಿಯಾಗಿರಬೇಕೇಹೊರತು ದೌರ್ಬಲ್ಯವಾಗಬಾರದೆಂದು ಸರ್ಕಾರ ನಿರ್ಧರಿಸಿದೆ. ಈ ಮೂಲಕ ಭಾರತದ ಗಡಿ ಮೂಲಸೌಕರ್ಯದ ಚಿತ್ರಣವನ್ನೇ ಬದಲಾಯಿಸಿದ್ದೇವೆ. ವಿಶ್ವದಲ್ಲೇ ಅತ್ಯಂತ ಅಗ್ಗದ ಡೇಟಾ ಭಾರತದಲ್ಲಿ ಲಭ್ಯವಿದೆ. ದೇಶವು ಅಗ್ಗದ ಮತ್ತು ಗುಣಮಟ್ಟದ ಮೊಬೈಲ್‌ಗಳನ್ನು ತಯಾರಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

# ಪ್ರಾರಂಭಿಕ ಹಂತದಲ್ಲೇ ವ್ಯಾಜ್ಯ ಪರಿಹರಿಸಿಕೊಳ್ಳಲು ಪ್ರಯತ್ನಿಸಿ

» ಮೊದಲನೇ ಪುಟದಿಂದ

ಹೋಗುತ್ತಿದ್ದು ಚಿಕ್ಕಪುಟ್ಟ ವ್ಯಾಜ್ಯ ಗಳಿಗೂ ಪೊಲೀಸ್ ಠಾಣೆ ಮೆಟ್ಟಿಲೇರು ವವರ ಸಂಖ್ಯೆ ಹೆಚ್ಚುತ್ತಿದೆ. ಪ್ರತಿಯೊಬ್ಬರಲ್ಲೂ ಹೊಂದಾಣಿಕೆಯ ಅಭಾವ ಕಂಡುಬರುತ್ತಿದೆ. ಇದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಅದನ್ನು ಸೌಹಾರ್ದತೆಯಿಂದ ರಾಜಿ ಮೂಲಕ ಬಗೆಹರಿಸಿಕೊಂಡಲ್ಲಿ ಬಹು ಪಾಲು ವ್ಯಾಜ್ಯಗಳು ಪೊಲೀಸ್ ಠಾಣೆಯ ನ್ಯಾಯಾಲಯಗಳ ಮೆಟ್ಟಲೇರದೆ ಕೊನೆಗೊಳ್ಳುತ್ತವೆಂದು ತಿಳಿಸಿದರು.

ಹೆರಗು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ॥ ವಿಕಾಸ್ ಅವರು ಮಾತನಾಡಿ, ಆರೋಗ್ಯ ಇಲಾಖೆಯಲ್ಲಿ ಇರು ವಂತಹ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಸಿಡಿಪಿಓ ಕೆ.ಸಿ.ಜ್ಯೋತಿಲಕ್ಷ್ಮಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಯಲ್ಲಿ ಯೋಜನೆಗಳ ಕುರಿತು ಬೆಳಕು ಚೆಲ್ಲಿದರು.

ಕಾರ್ಮಿಕ ನಿರೀಕ್ಷಕ ಆನಂದರಾಮು, ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿ ಚಂದ್ರಶೇಖರ್ ಮಾತನಾಡಿದರು.

ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿ ಜಿ.ಎ.ನಿಶ್ಚಿತ, ಅಭಿವೃದ್ಧಿ ಅಧಿಕಾರಿ ಎ.ಹೆಚ್.ಅಭಿಲಾಷ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ॥ ಬಿ.ಎಂ.ವಿಜಯ್, ಶಿಕ್ಷಣ ಇಲಾಖೆಯ ಚಂದ್ರಯ್ಯ ಹಾಜರಿದ್ದರು.

# ಗ್ರಾ.ಪಂ. ಮೀಸಲಾತಿ ಅಧಿಸೂಚನೆ ರದ್ದುಪಡಿಸಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಕ್ಷೇತ್ರಗಳಿಗೆ ನಿಗದಿಪಡಿಸಿರುವ ಮೀಸಲಾತಿ ಅಧಿಸೂಚನೆಯನ್ನು ಕೂಡಲೇ ರದ್ದುಪಡಿಸಿ, ಸಾರ್ವಜನಿಕರಿಂದ ಆಕ್ಷೇಪಣೆ ಹಾಗು ಅಹವಾಲುಗಳನ್ನು ಸ್ವೀಕರಿಸಿ ಪಾರದರ್ಶಕವಾಗಿ ಮರುಮೀಸಲಾತಿ ನಿಗದಿಪಡಿಸಬೇಕೆಂದು ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್. ದ್ಯಾವೇಗೌಡ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಗಳಿಗೆ ವರ್ಗಾ ವಾರು ಮೀಸಲಾತಿ ನಿಗದಿಪಡಿಸುವ ಸಂಬಂಧ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳಂತೆ ಪ್ರಕ್ರಿಯೆ ನಡೆಸಬೇಕಾಗಿದೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮೀಸಲಾತಿ ನಿಗದಿಪಡಿಸುವ ಸಂದರ್ಭದಲ್ಲಿ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಲಾಗಿಲ್ಲ ಎಂದು ಆರೋಪಿಸಿದರು.

ಆಯಾ ಕ್ಷೇತ್ರಗಳಲ್ಲಿ ವಿವಿಧ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುವಂತೆ ಮೀಸಲಾತಿ ನಿಗದಿಪಡಿಸಬೇಕಿದ್ದರೂ, ಕೆಲವು ಕ್ಷೇತ್ರಗಳಲ್ಲಿ ಸಾಮಾನ್ಯವರ್ಗ, ಪರಿಶಿಷ್ಟ ಜಾತಿ ಹಾಗು ಹಿಂದುಳಿದ ವರ್ಗಗಳಿಗೆ ಸಮರ್ಪಕ ಅವಕಾಶ ಕಲ್ಪಿಸದೆ ಮೀಸಲಾತಿ ನಿಗದಿಪಡಿಸಲಾಗಿದೆ. ಹಾಸನ ತಾಲ್ಲೂಕು ತಹಶೀಲ್ದಾರ್ ಕಚೇರಿಯಿಂದ ಕಳುಹಿಸಲಾದ ಪ್ರಸ್ತಾವನೆಯಲ್ಲಿಯೂ ಲೋಪಗಳಾಗಿದ್ದು, ಜಿಲ್ಲಾಧಿಕಾರಿ ಕಚೇರಿಯಲ್ಲೂ ಅದನ್ನು ಸಮರ್ಪಕವಾಗಿ ಪರಿಶೀಲಿಸದೆ ಆಗಸ್ಟ್ 18ರಂದು ಅಧಿಸೂಚನೆ ಹೊರಡಿಸಲಾಗಿದೆ ಎಂದು ದೂರಿದರು.

ಬಾಹ್ಯ ರಾಜಕೀಯ ಒತ್ತಡಕ್ಕೆ ಒಳಗಾಗಿ ಕೆಲವರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ದಿಂದ ಮೀಸಲಾತಿ ನಿಗದಿಪಡಿಸಲಾಗಿದೆ ಎಂಬ ಅನುಮಾನ ಮೂಡುತ್ತಿದೆ. ಅದರಿಂದ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗು ಹಿಂದುಳಿದ ವರ್ಗದ ಆಕಾಂಕ್ಷಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶಕ್ಕೆ ತೊಂದರೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ಎಲ್ಲಾ ಎಂಟು ತಾಲ್ಲೂಕುಗಳ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿ ಕ್ಷೇತ್ರ ಗಳಲ್ಲಿಯೂ ಇದೇ ರೀತಿಯ ಸಮಸ್ಯೆಗಳಿರುವ ಆರೋಪಗಳು ಕೇಳಿಬರುತ್ತಿವೆ. ಆಯಾ ತಾಲ್ಲೂಕಿನ ಅಧಿಕಾರಿಗಳು ನಿಯಮಾನುಸಾರ ಮೀಸಲಾತಿ ನಿಗದಿಪಡಿಸದೆ ಮನಸೋಇಚ್ಛೆ ಕ್ರಮ ಕೈಗೊಂಡಿರುವ ಬಗ್ಗೆ ದೂರುಗಳಿದ್ದು, ಜಿಲ್ಲಾಡಳಿತ ಸಮಗ್ರ ಪರಿಶೀಲನೆ ನಡೆಸಬೇಕು. ಇಲ್ಲವಾದಲ್ಲಿ ಮುಂದಿನ ಹಂತದಲ್ಲಿ ಕಾನೂನುಬದ್ಧ ಹಾಗು ಪ್ರಜಾಸತ್ತಾತ್ಮಕ ಹೋರಾಟ ನಡೆಸ ಬೇಕಾಗುತ್ತದೆಂದರು.

ಹೆಚ್.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ನಾಗರಾಜು, ಆಲೂರು ತಾಲ್ಲೂಕು ಜೆಡಿಎಸ್‌ಅಧ್ಯಕ್ಷ ಮಂಜೇಗೌಡ, ಮುಖಂಡ ಶಿವಣ್ಣ, ಬ್ಯಾಂಕ್‌ನಿರ್ದೇಶಕ ಬಿದರಿಕೆರೆ ಜಯರಾಮ್ ಇದ್ದರು.

# ವಿಶೇಷಚೇತನ ಮಕ್ಕಳಿಗೆ ನೆರವಾಗಲು ಸಂಗೀತ ಕಾರ್ಯಕ್ರಮ




• ಪ್ರಜೋದಯ ವರದಿ

**ಹಾಸನ:** ವಿಶೇಷಚೇತನ ಮಕ್ಕಳಿಗೆ ನೆರವು ನೀಡುವ ಉದ್ದೇಶದಿಂದ ಬೆಂಗಳೂರಿನ ಕರ್ನಾಟೆಕ್ ತಂಡದಿಂದ ಆ.29 ರಂದು ಫ್ಯೂಷನ್-ಮ್ಯೂಸಿಕಲ್ ರಸ ಸಂಜೆ ಸಂಗೀತ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬ್ರಾಹ್ಮಣ ಯುವಜನ ಸಭಾದ ಅಧ್ಯಕ್ಷ ಈಶಾ ಸ್ಮಾರ್ಟ್ ಅವರು ತಿಳಿಸಿದರು.

ಶನಿವಾರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ಕಾರ್ಯಕ್ರಮ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸಂಜೆ 5.30 ರಿಂದ ರಾತ್ರಿ 8.30ರ ವರೆಗೆ ನಡೆಯಲಿದೆ. ಶಾಸ್ತ್ರೀಯ ಸಂಗೀತ ಮತ್ತು ಪಾಶ್ಚಾತ್ಯ ಸಂಗೀತದ ಸಮ್ಮಿಲನವಿರುವ ಫ್ಯೂಷನ್ ಸಂಗೀತ ಪ್ರಿಯರಿಗೆ ಹೊಸ ಅನುಭವ ನೀಡಲಿದೆ ಎಂದರು.

ವಿಶೇಷ ಚೇತನ ಮಕ್ಕಳಿಗಾಗಿ ನಡೆಸಲಾಗುತ್ತಿರುವ ಸಾಧ್ಯ ವಸತಿಯುತ ವಿಶೇಷ ಶಾಲೆಯ ಮಕ್ಕಳಿಗೆ ನೆರವು ನೀಡುವುದು ಇದರ ಉದ್ದೇಶ. ನಿಮ್ಮದೊಂದು ಪುಟ್ಟ ನೆರವು, ವಿಶೇಷ ಚೇತನರ ಬಾಳಲ್ಲಿ ಮೂಡಿಸಲಿ ಹೊಸ ಬೆಳಕು ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅದರಿಂದ ಸಂಗ್ರಹವಾಗುವ ಹಣವನ್ನು ಶಾಲೆಯ ಮಕ್ಕಳ ಏಳಿಗೆಗಾಗಿ ಬಳಸಲಾಗುವುದು. ಅದಕ್ಕೆ ಒಬ್ಬರಿಗೆ 100 ರೂ. ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ ಎಂದರು.

ಮಾಹಿತಿ ಹಾಗು ಟಿಕೆಟ್‌ಗಳಿಗಾಗಿ 98446 41800 ಅಥವಾ 82172 71392 ನಂಬರ್ ಸಂಪರ್ಕಿಸಬಹುದು. ಸಂಗೀತ ಪ್ರಿಯರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮನವಿ ಮಾಡಿದರು. ಸಭಾದ ಪದಾಧಿಕಾರಿಗಳಾದ ಪೂಜಾ ರಘುನಂದನ್, ನಾಗೇಂದ್ರ ಸುಮಂತ್, ಯಶ್ವಂತ್, ರೂಪಾ ಮುರುಳಿ, ವಿದ್ಯಾಜಗದೀಶ್ ಇದ್ದರು.

## ಆ.28ಕ್ಕೆ ಕಾರ್ಜುವಳ್ಳಿ ಮಠದಲ್ಲಿ ಲಕ್ಷ ಕುಂಕುಮಾರ್ಚನೆ

• ಪ್ರಜೋದಯ ವರದಿ



**ಆಲೂರು:** ತಾಲ್ಲೂಕಿನ ಕಾರ್ಜುವಳ್ಳಿ ಸಂಸ್ಥಾನ ಮಠದಲ್ಲಿ ಆ.28ರ ಶುಕ್ರವಾರ ಲಕ್ಷ ಕುಂಕುಮಾರ್ಚನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನವದುರ್ಗೆ ಪರಮೇಶ್ವರಿ ಅಮ್ಮನವರಿಗೆ ಕುಂಕುಮಾರ್ಚನೆ ಸೇವೆ ಸಲ್ಲಿಸುವುದು ಪ್ರತಿ ವರ್ಷದ ವಾಡಿಕೆ. ಅಂದು ಬೆಳಿಗ್ಗೆ 10 ಗಂಟೆಯಿಂದ ಧಾರ್ಮಿಕ ಕೈಂಕರ್ಯಗಳು ಪ್ರಾರಂಭವಾಗಲಿವೆ. ಸೇವೆಯಲ್ಲಿ ಭಾಗವಹಿಸುವ ಭಕ್ತರು ನೀರಿಲ್ಲದ ಹಾಗೆ ಒರೆಸಿದ 5 ಬಾಳೆ ಎಲೆ, 2 ದೀಪ, 1 ಉದ್ಧರಣೆ, ಮಹಾ ಮಂಗಳಾರತಿಗೆ ಭತ್ತಿ, ಕರ್ಪೂರ, ಅಗರಬತ್ತಿ, ತೆಂಗಿನಕಾಯಿ ಹಾಗು ಬಾಳೆಹಣ್ಣು, ಮಡಿಲಕ್ಕಿ ಹಾಗು ಬಾಗಿನ ಪದಾರ್ಥಗಳನ್ನು ತರಬೇಕು. ಸೇವಾ ಶುಲ್ಕ 108 ರೂ. ಪಾವತಿಸಬೇಕೆಂದು ಶ್ರೀ ಸಂಸ್ಥಾನ ಹಿರೇಮಠದ ಪೀಠಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ ತಿಳಿಸಿದ್ದಾರೆ.

## ಕೇಂದ್ರ ಸರ್ಕಾರ ಅನುಮೋದನೆ: ಸಂಸದ ಶ್ರೇಯಸ್ ಪಟೇಲ್

# ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಎನ್‌ಆರ್‌ಸಿ ಸ್ಥಾಪನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರಗಳ (ಎನ್‌ಆರ್‌ಸಿ) ಸ್ಥಾಪನೆಗೆ ಅನುಮೋದನೆ ದೊರೆತಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದ್ದಾರೆ.

ಸಂಸತ್ತಿನಲ್ಲಿ ತಾವು ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರ ಉತ್ತರ ನೀಡಿದೆ. 2026-27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಅರಸೀಕೆರೆ, ಬೇಲೂರು, ಸಕಲೇಶಪುರ ಹಾಗು ಅರಕಲಗೂಡು ತಾಲ್ಲೂಕುಗಳಲ್ಲಿ ಹೊಸ ಎನ್‌ಆರ್‌ಸಿ ಸ್ಥಾಪಿಸಲು ಅನುಮೋದನೆ ದೊರೆತಿದೆ. ನಗರದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್)ನಲ್ಲಿ 20 ಹಾಸಿಗೆಗಳ ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ. ಇದೀಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಮತ್ತಷ್ಟು ಕೇಂದ್ರಗಳು ಆರಂಭವಾಗುವುದರಿಂದ ಗ್ರಾಮೀಣ ಪ್ರದೇಶಗಳ ಅಪೌಷ್ಟಿಕ ಮಕ್ಕಳಿಗೆ ಸ್ಥಳೀಯವಾಗಿಯೇ ಅಗತ್ಯ ಚಿಕಿತ್ಸಾ ಹಾಗು ಪೌಷ್ಟಿಕ ಸೇವೆಗಳು ದೊರೆಯಲಿವೆ ಎಂದು ತಿಳಿಸಿದ್ದಾರೆ.



**ಹಾಸನಾಂಬ ದೇವಾಲಯ ಅಭಿವೃದ್ಧಿಗೆ ಪ್ರಯತ್ನ**

ಹಾಸನದ ಅಧಿದೇವತೆ ಹಾಸನಾಂಬ ದೇವಾಲಯದಲ್ಲಿ ಭಕ್ತರಿಗೆ ಅಗತ್ಯ ಮೂಲಸೌಕರ್ಯ ಹಾಗು ಸೌಲಭ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದೇನೆ. ಇತ್ತೀಚೆಗೆ ಲೋಕಸಭೆಯಲ್ಲಿ ಹಾಸನಾಂಬ ದೇವಾಲಯದ ಅಭಿವೃದ್ಧಿ ಹಾಗೂ ಭಕ್ತರಿಗೆ ಅಗತ್ಯ ಸೌಲಭ್ಯಗಳ ಕುರಿತು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿರುವುದಾಗಿ ಅವರು ಹೇಳಿದ್ದಾರೆ. ಪ್ರಸ್ತುತ ಹಾಸನಾಂಬ ದೇವಾಲಯ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಕೇಂದ್ರ ಸಂರಕ್ಷಿತ ಸ್ಮಾರಕ ಗಳ ಪಟ್ಟಿಯಲ್ಲಿ ಇಲ್ಲ. ದೇವಾಲಯಕ್ಕೆ ಸಂಬಂಧಿಸಿದ ಯಾವುದೇ ಯೋಜನೆಯು ಸದ್ಯ ಪ್ರಸಾದ್ ಯೋಜನೆಯಡಿ ಪರಿಗಣನೆಯಲ್ಲಿಲ್ಲ ಎಂದು ಕೇಂದ್ರ ಉತ್ತರ ನೀಡಿದೆ.

ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ಮೂಲಸೌಕರ್ಯ ಹಾಗು ಅಗತ್ಯ ಸೌಲಭ್ಯ ಕಲ್ಪಿಸುವು ದರ ಜೊತೆಗೆ ಹಾಸನದ ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ತಮ್ಮ ಉದ್ದೇಶವಾಗಿದೆ. ಸಾಂಸ್ಕೃತಿಕ ಹಾಗು ಐತಿಹಾಸಿಕ ಮಹತ್ವವನ್ನು ರಾಷ್ಟ್ರ ಮಟ್ಟದಲ್ಲಿ ಮತ್ತಷ್ಟು ಪರಿಚಯಿಸುವ ನಿಟ್ಟಿನಲ್ಲಿಯೂ ಪ್ರಯತ್ನಿಸಲಾಗುವುದೆಂದು ಭರವಸೆ ನೀಡಿದ್ದಾರೆ.

ಹಾಸನಾಂಬ ದೇವಾಲಯದ ಧಾರ್ಮಿಕ, ಸಾಂಸ್ಕೃತಿಕ ಹಾಗು ಐತಿಹಾಸಿಕ ಮಹತ್ವ ಮತ್ತು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಭಕ್ತರ ಸಂಖ್ಯೆ ಪರಿಗಣಿಸಿ, ದೇವಾಲಯದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವ ಅಗತ್ಯವಿದೆ. ಈ ಹಿನ್ನಲೆ ರಾಜ್ಯ ಸರ್ಕಾರದಿಂದ ಸೂಕ್ತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಪ್ರಸಾದ್ ಯೋಜನೆಯಡಿ ಅಗತ್ಯ ಅನುದಾನ ದೊರಕಿಸುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಯಲಿದೆ ಎಂದು ಶ್ರೇಯಸ್ ಪಟೇಲ್ ಅವರು ಭರವಸೆ ನೀಡಿದ್ದಾರೆ.

## ಪಿಯು ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್

• ಪ್ರಜೋದಯ ವರದಿ



**ಬೆಂಗಳೂರು:** ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕ ವಿತರಿಸ ಲಾಗಿದೆ. ಮುಂದಿನ ದಿನಗಳಲ್ಲಿ ನೋಟ್‌ಬುಕ್‌ಗಳನ್ನು ಕೂಡ ನೀಡುವ ಉದ್ದೇಶವಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಯಾವ ತೊಂದರೆಯಾಗದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಕರ್ತವ್ಯ. ಆದರೆ ಎಲ್ಲವನ್ನೂ ಒಂದೇ ಬಾರಿಗೆ ಜಾರಿಗೊಳಿಸಲು ಆಗುವುದಿಲ್ಲ. ಹಂತ ಹಂತವಾಗಿ ರಾಜ್ಯದ ಎಲ್ಲಾ ಶಾಲೆ-ಪಿಯು ಕಾಲೇಜುಗಳಲ್ಲಿಯೂ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುತ್ತೇವೆ. ಅದಕ್ಕೆ ಅಗತ್ಯ ಸೌಕರ್ಯ ಒದಗಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

## ವೈನ್ ಶಾಪ್‌ನಲ್ಲಿ ಮದ್ಯ, ನಗದು ಕಳ್ಳತನ

• ಪ್ರಜೋದಯ ವರದಿ

**ಸಕಲೇಶಪುರ:** ಮಧ್ಯರಾತ್ರಿ ವೈನ್ ಶಾಪ್‌ನ ಶೆಲ್ಟರ್ ಬೀಗ ಮುರಿದು ಒಳನುಗ್ಗಿರುವ ಕಳ್ಳರು 50 ಸಾವಿರ ರೂ. ಮೌಲ್ಯದ ಮದ್ಯ ಹಾಗು 30 ಸಾವಿರ ರೂ. ಹಣ ಕದ್ದಿರುವ ಘಟನೆ ತಾಲ್ಲೂಕಿನ ಹೆತ್ತೂರಿನಲ್ಲಿ ನಡೆದಿದೆ.

ಗ್ರಾಮದ ಹೆತ್ತೂರು ವೈನ್ಸ್‌ನಲ್ಲಿ ಆ.19ರ ರಾತ್ರಿ ಕಳ್ಳತನ ನಡೆದಿದೆ. ಬೆಳಿಗ್ಗೆ 7.30ರ ಸುಮಾರಿಗೆ ಎದುರಿನ ಹೋಟೆಲ್ ಸಿಬ್ಬಂದಿ ಕರೆ ಮಾಡಿ ಮಾಹಿತಿ ನೀಡಿದಾಗ ವೈನ್‌ಶಾಪ್ ವ್ಯವಸ್ಥಾಪಕ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಮೂವರು ಅಪರಿಚಿತರು ಶೆಲ್ಟರ್ ಬೀಗ ಮುರಿದು ಒಳನುಗ್ಗಿರುವುದು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ರ್ಯಾಕ್ಟರ್ ಹರಿದು ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹೊಳೆನರಸೀಪುರ:** ರಸ್ತೆ ಬದಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಮೇಲಿದ್ದ ಮೂರು ವರ್ಷದ ಮಗು ಗೊತ್ತಿಲ್ಲದೆ ಕೀ ತಿರುಗಿಸಿದ ಪರಿಣಾಮ ಚಕ್ರಕ್ಕೆ ಸಿಲುಕಿ ಮಗುವಿನ ತಂದೆ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ನಿವಾಸಿ ಹಾಗು ಅರಕಲಗೂಡು ಕೆಎಸ್‌ಆರ್‌ಟಿಸಿ ಡಿಪೋ ಉದ್ಯೋಗಿ ಹೆಚ್.ಡಿ. ಯಶವಂತ್ (36) ಮೃತರು. ಮನೆ ನಿರ್ಮಾಣ ಕಾಮಗಾರಿ ಕೈಗೊಂಡಿದ್ದ ಯಶವಂತ್ ಟ್ರ್ಯಾಕ್ಟರ್‌ನಲ್ಲಿಸೆಂಟರಿಂಗ್ ಸಾಮಾಗ್ರಿ ತುಂಬಿಕೊಂಡು ಬಂದು ಮನೆ ಮುಂದೆ ನಿಲ್ಲಿಸಿದ್ದರು. ನಂತರ ಆಟ ವಾಡುತ್ತಾ ಓಡೋಡಿ ಬಂದ ಮಗು ವನ್ನು ಎತ್ತಿಕೊಂಡು ಅಲ್ಲೇ ಕುಳಿತಿ ದ್ದರು. ಈ ವೇಳೆ ಮಗುವಿಗೆ ಗೊತ್ತಾ ಗದೆ ಕೀ ತಿರುಗಿಸಿದ್ದುಇಳಿಜಾರಿನಲ್ಲಿದ್ದ ಟ್ರ್ಯಾಕ್ಟರ್ ಮುಂದಕ್ಕೆ ಚಲಿಸಿದೆ. ಮಗು ಕೆಳಗೆ ಬೀಳುತ್ತದೆಂದು ಯಶವಂತ್ ಹಿಡಿಯಲು ಹೋದಾಗ ಆಯತಪ್ಪಿ ಚಕ್ರದಡಿ ಸಿಲುಕಿದ್ದಾರೆ. ತಲೆ ಹಾಗು ಎದೆಗೆ ಬಲವಾದ ಪೆಟ್ಟು ಬಿದ್ದ ಹಿನ್ನಲೆಯಲ್ಲಿ ಪಟ್ಟಣದ ಸಾರ್ವ ಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹಿಮ್ಸ್‌ಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಮಗು ಪ್ರಾಣಾಪಾಯದಿಂದ ಪಾರಾಗಿದೆ. ಯಾವುದೇ ಸಂಚಾರ ನಿಯಮ ಪಾಲಿಸದೆ, ಹ್ಯಾಂಡ್ ಬ್ರೇಕ್ ಹಾಕದೆ ಇರುವುದೇ ಅವಘಡಕ್ಕೆ ಕಾರಣವಾ ಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಆ.28ರಂದು ರಾಜ್ಯಮಟ್ಟದ ಐಕ್ಯತಾ ಸಮಾವೇಶ

• ಪ್ರಜೋದಯ ವರದಿ

**ಹಾಸನ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ನೌಕರರ ಹಕ್ಕು, ಸೌಲಭ್ಯ ಹಾಗು ಸಂವಿಧಾನ ಬದ್ಧ ಮೀಸಲಾತಿಯನ್ನು ಸಮರ್ಪಕವಾಗಿ ಜಾರಿಗೊಳಿಸುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ಎಸ್‌ಸಿ-ಎಸ್‌ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಆ.28ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ 6ನೇ ರಾಜ್ಯಮಟ್ಟದ ಐಕ್ಯತಾ ಸಮಾವೇಶ ಹಮ್ಮಿ ಕೊಳ್ಳಲಾಗಿದೆ ಎಂದು ಸಮಿತಿ ರಾಜ್ಯಾಧ್ಯಕ್ಷ ಡಿ.ಶಿವಶಂಕರ್ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ವಿವಿಧ ಇಲಾಖೆಗಳ ಎಸ್‌ಸಿ -ಎಸ್‌ಟಿ ನೌಕರರನ್ನು ಸಂಘಟಿಸಿ, ಸಂವಿಧಾನ ಹಾಗು ಸರ್ಕಾರದ ಆದೇಶಗಳಂತೆ ದೊರೆಯ ಬೇಕಾದ ಹಕ್ಕು-ಸೌಲಭ್ಯಗಳನ್ನು ಖಾತರಿಪಡಿಸುವ ಉದ್ದೇಶದಿಂದ ಸಮಿತಿ ಹಲವು ವರ್ಷ ಗಳಿಂದ ಹೋರಾಟ ನಡೆಸುತ್ತಿದೆ. ಐಕ್ಯತೆ, ವೈಚಾರಿಕತೆ ಮತ್ತು ಪ್ರಗತಿ ಸಂಘಟನೆಯ ಪ್ರಮುಖ ಆಶಯಗಳಾಗಿವೆ ಎಂದರು.



ರಾಜ್ಯದ ವಿವಿಧ ಇಲಾಖೆಗಳ 7.75 ಲಕ್ಷ ಮಂಜೂರಾದ ಹುದ್ದೆಗಳ ಪೈಕಿ 2.84 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಉಳಿದಿದ್ದು, ಸುಮಾರು 24 ಸಾವಿರ ಬ್ಯಾಕ್‌ಲಾಗ್ ಹುದ್ದೆಗಳೂ ಭರ್ತಿ ಯಾಗಿಲ್ಲ. ಇದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಗಂಭೀರ ವಿಚಾರವಾಗಿದೆ. ಎಸ್‌ಸಿ- ಎಸ್‌ಟಿ ನೌಕರರಿಗೆ ಮೀಸಲಾತಿ, ಬಡ್ತಿ ಸೇರಿ ಕಾನೂನುಬದ್ಧ ಸೌಲಭ್ಯಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಆ.28ರಂದು ನಡೆಯುವ ಸಮಾವೇಶವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿ ಸಲಿದ್ದು, ಉಪಮುಖ್ಯಮಂತ್ರಿ ಜಿ.ಪರಮೇಶ್ವರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವರು, ಶಾಸಕರು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ದಲಿತ-ಹಿಂದುಳಿದ-ಅಲ್ಪಸಂಖ್ಯಾತ ಸಮುದಾಯಗಳ ಪ್ರತಿನಿಧಿಗಳು, ಪ್ರಗತಿಪರ ಸ್ವಾಮೀಜಿಗಳು ಹಾಗೂ ಚಿಂತಕರು ಭಾಗವಹಿಸಲಿ ದ್ದಾರೆಂದು ಹೇಳಿದರು.

ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವಿಜಯಕುಮಾರ್, ಶಿವಕುಮಾರ್, ಅಧ್ಯಕ್ಷ ಕಾಳಯ್ಯ, ಉಪಾಧ್ಯಕ್ಷ ಅತ್ತಿಕೃಷ್ಣಯ್ಯ, ಜಯರಾಮ್ ಮತ್ತಿತರರು ಉಪಸ್ಥಿತರಿದ್ದರು.

# ಉಸೇನ್ ಬೋಲ್ಟ್ ವಿಶ್ವ ದಾಖಲೆ ಮುರಿದ ಚೀನಾದ ರೊಬೋಟ್

• ಪ್ರಜೋದಯ ವರದಿ

**ಬೀಜಿಂಗ್:** ಚೀನಾದ ಸ್ಮಾರ್ಟ್‌ಫೋನ್ ತಯಾರಿಕಾ ಸಂಸ್ಥೆ ಆನರ್ ಅಭಿವೃದ್ಧಿಪಡಿಸಿದ ಮಾನವರನ್ನು ಹೋಲುವ ರೊಬೊಟ್ (ಹ್ಯೂಮನಾಯ್ಡ್ ರೊಬೊಟ್) 100 ಮೀಟರ್ ಓಟವನ್ನು 9.32 ಸೆಕೆಂಡುಗಳಲ್ಲಿ ಪೂರ್ಣ ಗೊಳಿಸಿದೆ. ಇದರೊಂದಿಗೆ ಜಮೈಕಾದ ದಿಗ್ಗಜ ಅಥ್ಲೀಟ್ ಉಸೇನ್ ಬೋಲ್ಟ್ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮುರಿದಿದೆ.

ಲೈಟ್ನಿಂಗ್ ಎಂದು ಕರೆಯಲ್ಪಡುವ ಈ ರೊಬೊಟ್, ಬೀಜಿಂಗ್‌ನಲ್ಲಿ ಚಾಲನೆ ಪಡೆದ ಎರಡನೇ ವರ್ಲ್ಡ್ ಹ್ಯೂಮನಾಯ್ಡ್ ರೊಬೊಟ್ ಗೇಮ್ಸ್‌ನ ಪೂರ್ವಭಾವಿ ತರಬೇತಿ ಸ್ಪರ್ಧೆಯಲ್ಲಿ ಸೆಕೆಂಡಿಗೆ ಗರಿಷ್ಠ 14.5 ಮೀಟರ್ ವೇಗವನ್ನು ಕ್ರಮಿಸಿದೆ ಎಂದು ಚೀನಾದ ಸರ್ಕಾರಿ ವಾಹಿನಿ ವರದಿ ಮಾಡಿದೆ.

2009ರಲ್ಲಿ ಬರ್ಲಿನ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಬೋಲ್ಟ್ ಅವರು ನಿರ್ಮಿಸಿದ್ದ 9.58 ಸೆಕೆಂಡುಗಳ 100 ಮೀಟರ್ ವಿಶ್ವ ದಾಖಲೆಯನ್ನು ಈ ರೊಬೊಟ್ ಹಿಂದಿಕ್ಕಿದೆ ಎನ್ನಲಾಗಿದೆ.

ಚೀನಾ ಹುಮನಾಯ್ಡ್ ರೊಬೊಟ್‌ಗಳನ್ನು ಕಾರ್ಯತಂತ್ರದ ಉದಯೋನ್ಮುಖ ಉದ್ಯಮವಾಗಿ ಉತ್ತೇಜಿಸುತ್ತಿದೆ. ಕೃತಕ ಬುದ್ಧಿಮತ್ತೆ (ಎಐ) ಹಾಗೂ ಹಾರ್ಡ್‌ವೇರ್ ಕ್ಷೇತ್ರದ ಪ್ರಗತಿಯು ಉತ್ಪಾದನೆ, ಲಾಜಿಸ್ಟಿಕ್ಸ್ ಹಾಗೂ ಗ್ರಾಹಕ ಸೇವಾ ವಲಯಗಳಲ್ಲಿ ರೊಬೊಟ್‌ಗಳ ಬಳಕೆ ಪ್ರಮುಖ ಪಾತ್ರವಹಿಸಿವೆ ಎಂಬುದು ನೀತಿ ನಿರೂಪಕರು ಮತ್ತು ವಿವಿಧ ಕಂಪನಿಗಳು ಅಭಿಪ್ರಾಯಪಟ್ಟಿವೆ.

ಏಪ್ರಿಲ್‌ನಲ್ಲಿ ಲೈಟ್ನಿಂಗ್ ರೊಬೊಟ್ 21 ಕಿ.ಮೀ. ಬೀಜಿಂಗ್ ಹಾಫ್ ಮ್ಯಾರಥಾನ್ ಅನ್ನು 50 ನಿಮಿಷ ಮತ್ತು 26 ಸೆಕೆಂಡುಗಳಲ್ಲಿ ಗೆದ್ದಿತು. ಇದು ಖ್ಯಾತ ಅಥ್ಲೀಟ್‌ಗಳ ವಿಶ್ವ ದಾಖಲೆಯ ವೇಗವನ್ನು ಮೀರಿದ್ದಾಗಿತ್ತು. ಹಾಫ್ ಮ್ಯಾರಥಾನ್ ಸಂದರ್ಭದಲ್ಲಿ ಈ ರೊಬೊಟ್ 169 ಸೆಂ.ಮೀ ಎತ್ತರ ವಿತ್ತು. 95 ಸೆಂ.ಮೀ ಉದ್ದದ ಕಾಲುಗ ಳನ್ನು ಹೊಂದಿತ್ತು. ವರ್ಲ್ಡ್ ಹ್ಯೂಮನಾಯ್ಡ್ ರೊಬೊಟ್ ಗೇಮ್ಸ್‌ಗೆ ಮುಂಚಿತವಾಗಿ ಸಂಶೋಧಕರು ಇದರ ಕಾಲುಗಳನ್ನು 10 ಸೆಂ.ಮೀ ಹೆಚ್ಚಿಸಿ, ಒಟ್ಟು 1.05 ಮೀಟರ್‌ಗೆ ವಿಸ್ತರಿಸಿ ದ್ದಾರೆ ಎಂದು ವರದಿಯಾಗಿದೆ.

## ಆ.25 ರಂದು ಅಂಗನವಾಡಿ ನೌಕರರ ಪ್ರತಿಭಟನೆ

• ಪ್ರಜೋದಯ ವರದಿ




**ಹಾಸನ:** ಅಂಗನವಾಡಿ ಕಾರ್ಯಕರ್ತೆಯರು ಹಾಗು ಸಹಾಯಕಿಯರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆ.25 ರಂದು ಜಿಲ್ಲಾ ಅಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವು ದೆಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆ ಯರ ಮತ್ತು ಸಹಾಯಕಿಯರ ಫೆಡರೇಶನ್ ಜಿಲ್ಲಾ ಖಜಾಂಚಿ ಪಿ.ಡಿ.ನಾಗರತ್ನ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವು ತಿಂಗಳಿಂದ ಬಾಕಿ ಇರುವ ಗೌರವಧನ ವನ್ನು ಕೂಡಲೇ ಬಿಡುಗಡೆ ಮಾಡಬೇಕು. ಅಂಗನವಾಡಿ ಕೆಲಸಕ್ಕೆ ಸಂಬಂಧಿಸದ ಎಸ್‌ಐಆರ್ ಸಮೀಕ್ಷೆ, ಮನೆ- ಮನೆಗೆ ಜಾತಿ ಪ್ರಮಾಣಪತ್ರ ವಿತರಣೆ, ಗೃಹಲಕ್ಷ್ಮಿ ಸಮೀಕ್ಷೆ ಸೇರಿ ವಿವಿಧ ಇಲಾಖೆಗಳ ಹೆಚ್ಚುವರಿ ಕೆಲಸಗ ಳಿಂದ ಕಾರ್ಯಕರ್ತೆಯರನ್ನು ಮುಕ್ತಗೊಳಿಸಬೇಕೆಂದು ಒತ್ತಾಯಿಸಿದರು.

11ನೇ ವೇತನ ಆಯೋಗದ ಶಿಫಾರಸು ಜಾರಿಗೊಳಿ ಸುವ ಜೊತೆಗೆ ಗ್ರಾಚ್ಯುಟಿ ಸೇರಿ ಬಾಕಿ ಸೌಲಭ್ಯ ನೀಡಬೇಕು. ಪ್ರಭಾರ ಹಾಗೂ ತುಟ್ಟಿ ಭತ್ಯೆ ಹೆಚ್ಚಿಸಬೇಕು. ಋತುಚಕ್ರದ ರಜೆ ಹಾಗು ಸಂಬಳ ಸಹಿತ ವೈದ್ಯಕೀಯ ರಜೆ ಮಂಜೂರು ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳ ಆರಂಭದಿಂದ ಅಂಗನ ವಾಡಿ ಕೇಂದ್ರಗಳಲ್ಲಿ ಮಕ್ಕಳ ದಾಖಲಾತಿ ಕುಸಿಯುತ್ತಿದ್ದು, ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಬೇಕು. ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಸ್ಥಳೀಯ ಸಮಸ್ಯೆಗಳನ್ನೂ ತಕ್ಷಣ ಪರಿಹರಿಸಬೇಕೆಂದು ಹೇಳಿದರು.

ಫೆಡರೇಶನ್ ಉಪಾಧ್ಯಕ್ಷೆ ಸಿ.ಆರ್.ನಾಗರತ್ನ, ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

# ಗೋ ಹತ್ಯೆ ತಡೆಗೆ ಶ್ರೀರಾಮ ಸೇನೆ ಒತ್ತಾಯ




• ಪ್ರಜೋದಯ ವರದಿ

**ಹಾಸನ:** ಅಕ್ರಮ ಬಾಂಗ್ಲಾ ವಲಸಿಗರ ನಿಯಂತ್ರಣ, ಗೋ ಹತ್ಯೆ ಮತ್ತು ಅಕ್ರಮ ಸಾಗಾಟಕ್ಕೆ ಕಡಿವಾಣ ಹಾಕಬೇಕೆಂದು ಶ್ರೀರಾಮ ಸೇನೆ ರಾಜ್ಯ ಕಾರ್ಯ ದರ್ಶಿ ಸುಂದ್ರೇಶ್ ಗೌಡ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಪ್ರಮೋದ್ ಮುತಾಲಿಕ್ ಅವರ ನೇತೃತ್ವದ ಶ್ರೀರಾಮ ಸೇನೆ ಅಕ್ರಮ ಚಟುವಟಿಕೆಗಳ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಕ್ರಮ ಬಾಂಗ್ಲಾ ವಲಸಿಗರ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಶ್ರೀರಾಮ ಸೇನೆಯ ಕಾರ್ಯಕರ್ತರೇ ಐವರು ಅಕ್ರಮ ಬಾಂಗ್ಲಾ ವಲಸಿಗರನ್ನು ಪತ್ತೆ ಹಚ್ಚಿ ಪೊಲೀಸರಿಗೆ ಒಪ್ಪಿಸಿದ್ದಾರೆ. ರಾಜ್ಯ ಸರ್ಕಾರ ನಿರೀಕ್ಷಿತ ಮಟ್ಟದಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ. ಗೃಹ ಸಚಿವರು ತಮ್ಮ ವ್ಯಾಪ್ತಿ ಬಿಟ್ಟು ವಿನಾಕಾರಣ ಬೇರೆ ವಿಚಾರಗಳನ್ನು ಪ್ರಸ್ತಾಪಿಸುತ್ತಾ ಕಾನೂನು ಸುವ್ಯವಸ್ಥೆಗೆ ತಿಲಾಂಜಲಿ ಇಡುತ್ತಿದ್ದಾರೆ. ವಿರೋಧ ಪಕ್ಷ ಬಿಜೆಪಿಯೂ ಈ ಕುರಿತು ಸಮರ್ಪಕವಾಗಿ ಧ್ವನಿ ಎತ್ತುತ್ತಿಲ್ಲ ಎಂದು ಕಿಡಿಕಾರಿದರು.

ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್, ಪದಾಧಿಕಾರಿಗಳಾದ ಪ್ರತಿಮಾ, ಜಾನೆಕೆರೆ ಹೇಮಂತ್, ಜಗದೀಶ್, ಮಹೇಶ್, ಅಮಿತ್, ಅರುಣ್, ಗಿರೀಶ್ ಹಾಗು ದರ್ಶನ್ ಹಾಜರಿದ್ದರು.

# ಅನುಘಟ್ಟ ಪತ್ತಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ

• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಅನುಘಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025-26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ಹೆಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜ್ ಅವರು ಮಾತನಾಡಿ, ಸೊಸೈಟಿ ವತಿಯಿಂದ ಇದುವರೆಗೆ ಮೂರು ಕೋಟಿಗೂ ಅಧಿಕ ರೂ. ಸಾಲ ವಿತರಿಸಲಾಗಿದೆ. ರೈತರು ಹಾಗು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಹಸು ಸಾಕಾಣಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಮೂರು ಲಕ್ಷ ರೂ. ವರೆಗೆ ಸಾಲ ನೀಡುವ ಯೋಜನೆ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಡೇರಿ ಸ್ಥಾಪಿಸುವ ಗುರಿಯನ್ನು ಹೊಂದಲಾಗಿದೆ. ಸದಸ್ಯರು ಸೊಸೈಟಿ ಮೂಲಕವೇ ರಸಗೊಬ್ಬರ ಖರೀದಿಸುವಂತೆ ಮನವಿ ಮಾಡಿದ ಅವರು, ಸೊಸೈಟಿಯಲ್ಲಿ ಠೇವಣಿ ಇಡುವುದರಿಂದ ಹೆಚ್ಚಿನ ಬಡ್ಡಿ ಲಾಭ ಪಡೆಯ ಬಹುದಾಗಿದೆಂದು ತಿಳಿಸಿದರು.

ಪತ್ತಿನ ಸಂಘದ ಅಧ್ಯಕ್ಷ ವೀರಭದ್ರ ಶೆಟ್ಟಿ ಅವರು ಮಾತನಾಡಿ, ಪ್ರತಿಯೊಬ್ಬ ಸದಸ್ಯರೂ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಲು ನೋಂದಣಿ ಮಾಡಿಸಿಕೊಳ್ಳಬೇಕು. ಸಹಕಾರ ಸಂಘದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುವ ಸದಸ್ಯರು ರಸಗೊಬ್ಬರವನ್ನು ಖಾಸಗಿ ಮಾರಾಟಗಾರರಿಂದ ಖರೀದಿಸುವುದು ಸರಿಯಲ್ಲ. ಸೊಸೈಟಿಯಲ್ಲಿಯೇ ರಸಗೊಬ್ಬರ ಖರೀದಿ ಸಿದರೆ ಸಂಘಕ್ಕೂ ಲಾಭವಾಗಲಿದ್ದು, ಆ ಲಾಭದಿಂದ ಸಂಸ್ಥೆಯ ಮತ್ತಷ್ಟು ಅಭಿವೃದ್ಧಿಗೆ ಸಹಕಾರಿ ಯಾಗುತ್ತದೆಂದರು.

ಸಹಕಾರ ಸಂಘದ ಅಭಿವೃದ್ಧಿಯಲ್ಲಿ ಸದಸ್ಯರ ಸಹಕಾರ ಮುಖ್ಯವಾಗಿದ್ದು, ಸೊಸೈಟಿ ಮೂಲಕ ದೊರೆಯುವ ಸಾಲ, ರಸಗೊಬ್ಬರ ಹಾಗೂ ಇತರೆ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಕರೆ ನೀಡಿದರು.

ಆಡಳಿತ ಮಂಡಳಿ ಉಪಾಧ್ಯಕ್ಷೆ ಹೆಚ್.ಇ. ಇಂದಿರಾ, ನಿರ್ದೇಶಕರಾದ ಕೆ.ಜಿ. ಕುಮಾರ್, ಡಿ.ಹೆಚ್.ಗೌಡ, ಎಂ.ಟಿ. ವೆಂಕಟೇಶ್, ಕೆ. ಎಸ್.ಮಂಜುನಾಥ್, ಸುಧಾ, ಬಿ.ಪಿ. ಬಸವ ರಾಜ್, ಬಿ.ಐ.ನಟರಾಜ್, ಸಿಇಒ ಸಿ.ಎನ್. ಸತೀಶ್, ಸಿಬ್ಬಂದಿ ಪ್ರೇಮ, ಕಿರಣ್ ಇದ್ದರು.



## ಶಿವಣ್ಣನವರಿಗೆ ಸಿಗದ ಸಚಿವ ಸ್ಥಾನ: ಅಸಮಾಧಾನ

**ನವದೆಹಲಿ:** ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳದ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರ ಮುಂದೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಾವು ಶಿಫಾರಸು ಮಾಡಿರುವ ಶಾಸಕರಿಗೆ ಆದಷ್ಟು ಬೇಗ ಸಂಪುಟದಲ್ಲಿ ಸ್ಥಾನ ನೀಡಲಾಗುವುದೆಂದು ವೇಣುಗೋಪಾಲ್ ಭರವಸೆ ನೀಡಿದ್ದಾರೆಂದು ಮೂಲಗಳು ತಿಳಿಸಿವೆ. ಶಿವಣ್ಣನವರ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂದು ಸಿದ್ದರಾಮಯ್ಯ ಒತ್ತಡ ಹೇರಿದ್ದರು. ಆದರೆ, ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರನ್ನು ಮಹಿಳಾ ಕೋಟಾದಲ್ಲಿ ಸಚಿವರನ್ನಾಗಿ ಮಾಡಲು ಹೈಕಮಾಂಡ್ ತೀರ್ಮಾನಿಸಿತ್ತು. ಅದರಿಂದ, ಸಿದ್ದರಾಮಯ್ಯ ಕೆರಳಿದ್ದರು. ಆ ಬಳಿಕ ಗಾಯತ್ರಿ ಸದ್ಯಕ್ಕೆ ಪ್ರಮಾಣ ವಚನ ಸ್ವೀಕರಿಸುವುದು ಬೇಡವೆಂದು ಹೈಕಮಾಂಡ್ ಸೂಚಿಸಿತ್ತು. ಸಚಿವರ ಪ್ರಮಾಣ ವಚನ ಸಮಾರಂಭಕ್ಕೂ ಮಾಜಿ ಮುಖ್ಯಮಂತ್ರಿ ಗೈರು ಹಾಜರಾಗಿದ್ದರು.

ಅಲ್ಲದೆ, ಮಹಿಳಾ ಕೋಟಾದಡಿಯಲ್ಲಿ ಪರಿಷತ್ ಸದಸ್ಯೆ ಉಮಾಶ್ರೀ ಅವರನ್ನು ಸಚಿವರನ್ನಾಗಿ ಮಾಡಬೇಕೆಂದು ಸಿದ್ದರಾಮಯ್ಯ ತಿಳಿಸಿದ್ದರು. ಉಮಾಶ್ರೀ ಅವರನ್ನು ವಿಧಾನ ಪರಿಷತ್ ಉಪ ಸಭಾಪತಿಯನ್ನಾಗಿ ಮಾಡಲಾಗಿದೆ. ಈ ನಡೆಗೂ ಸಿದ್ದರಾಮಯ್ಯ ಅತೃಪ್ತಿ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK